App. F. IX-4

Previous References

1938.
(LB)

File No. 85-38

Serial Nos. 1

Reserve

Letter References

GENERAL AND REVENUE SECRETARIAT.

Serial Nos.

Part B for Nov 38

SUBJECT.

Addresses presented to the Diwan during his tour in the Hassan District in Nov 38 and his replies to them

WD 0295—GPB—22,500—13-8-37

2/12

Submitted to His Highness.

I toured in the Hassan District from the 17th to the 20th November, 1938 and returned here last evening.

I beg to submit herewith, for His Highness's gracious perusal, copies of the addresses presented to me by the local bodies at the several places visited during the tour, conveying their sentiments of deep loyalty and devotion to His Highness, and also of my replies.

I took part in the following public functions during the tour:

1. Opening of the Hassan Water Works,
2. Opening of the Saklespur Water Works, and
3. Opening of the new (cinema) Theatre at Hassan.

Mirza M. Ismail

D E W A N.

Bangalore,

21st November 1938.

MB 85-38-1

H. H 34

2

General and Revenue
Secretariat.

SUBJECT:—

Addresses presented to the Heads on during his Tour in the Hassan District in November 1938 and his replies to them.

(*)

31. All urgent or confidential files returned with His Highness' orders may in the absence of instructions or indications to the contrary, be ordinarily circulated to the Members of Council for perusal after the issue of orders.

33. The Secretaries concerned should see that orders in the cases referred to above are issued at once and that the files are returned immediately after to the Chief Secretary for circulation to the Members.

34. In all other cases, the files will first be circulated to the Members of Council at Headquarters and then sent to the Secretariat concerned for the issue of orders.

Circulated to Members of Council for perusal of His Highness' orders before / after issue of orders. (*Vide* Rules 31, 33 and 34 of the Subsidiary Rules for the conduct of business of Council in the Manual of Council Rules and Procedure.)

*

Chief Secretary to Government.

Through the Secretary to Government,

.....Department.

FIRST MEMBER OF COUNCIL. (On deputation)

4235
26.11.38

SECOND MEMBER OF COUNCIL.

28-11

L. S. G. Secy. with compliments.

28/11

29.11.38

NOTE.—Contn. sheet.

WD 1467—GPB—500—23-2-38

Record of Cases submitted for the Orders of His Highness the Maharaja.

Subject.

Addresses presented to the Dewan during his tour in the Hassan District in November 1938 and his replies to them.

Chief Secy
M.
25-11-38

No. 342

Order.

~~KRW~~
24/11/38

MK
26.11.38

॥ ಸಿರಿಗನ್ನಡಂಗೆಲ್ಗೆ ॥

ಮೈಸೂರು ಸಂಸ್ಥಾನದ ಆಮಾತ್ಯ ಶ್ರೇಷ್ಠರಾದ

ಸರ್. ಮಿರ್ಜಾ, ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಒ.ಬಿ.ಇ.,

ಅವರ ಘನಸನ್ನಿಧಿಯಲ್ಲಿ

ಚನ್ನರಾಯಪಟ್ಟಣದ ಕರ್ಣಾಟಕ ಸಂಘದ ಸದಸ್ಯರುಗಳು ಅತ್ಯಂತ ಭಕ್ತಿ ವಿಶ್ವಾಸಗಳಿಂದ ಸಮರ್ಪಿಸಿದ ಬಿನ್ನಹ ಪತ್ರಿಕೆ.

ಸ್ವಾಮಿ,

ಕನ್ನಡ ನಾಡಿಗೆ ಅಲಂಕಾರಪ್ರಾಯವಾಗಿರುವ ನಮ್ಮ ಜಿಲ್ಲೆಯೊಳಗೆ, ಕನ್ನಡದ ಉತ್ಕಟಾಭಿಮಾನಿಗಳೂ, ದೇಶಸೇವಾ ಧುರೀಣರೂ, ವಿಶ್ವವಿಖ್ಯಾತರೂ ಆದ ತಾವು, ಪದಾರ್ಪಣ ಮಾಡಿದೊಡನೆಯೇ ಸುಸ್ವಾಗತವನ್ನು ಬಯಸುವ ಸುಯೋಗವು ನಮ್ಮ ಪಾಲಿಗೆ ಬಂದುದಕ್ಕಾಗಿ ನಮಗೆಲ್ಲ ಅತ್ಯಂತ ಹರ್ಷವಾಗಿದೆಯೆಂದು ಬಿನ್ನವಿಸಲು ಅಪ್ಪಣೆ ಬೇಡುತ್ತೇವೆ.

ತಮ್ಮ ಆಗಮನದಿಂದ ಇಂದು ನಮ್ಮ ಸಂಘದ ಇತಿಹಾಸದಲ್ಲಿ ಒಂದು ಹೊಸ ಉಜ್ವಲ ಪ್ರಕರಣವು ಆರಂಭವಾಯಿತೆಂದೂ, ಈ ಪ್ರಕರಣವು ಸುವರ್ಣಾಕ್ಷರಗಳಲ್ಲಿ ಬರೆಯಲು ಅರ್ಹವಾದುವುಗಳೆಂದೂ ನಾವು ಭಾವಿಸುತ್ತೇವಲ್ಲದೆ, ತಮ್ಮ ಸಹಾನುಭೂತಿ, ಪ್ರೀತಿ ಮತ್ತು ಶುಭಾಶಂಸನಗಳನ್ನು ಪಡೆದು ಸಂಘವು ಇಮ್ಮಡಿಯಾದ ಉತ್ಸಾಹದಿಂದ ನಾಡಿನ ಸೇವೆ ಮಾಡಲು ಶಕ್ತವಾಗುವುದೆಂದು ಬಿನ್ನವಿಸಲು ಬಹಳವಾಗಿ ಸಂತೋಷಿಸುತ್ತೇವೆ.

ಭಾಷಾಸೇವೆಯನ್ನೂ ಸಂಸ್ಕೃತಿಯ ಪುನರುಜ್ಜೀವನವನ್ನೂ ಗುರಿಯಾಗಿಟ್ಟುಕೊಂಡು ನಮ್ರತೆಯಿಂದ ಸೇವೆಮಾಡುತ್ತಿರುವ ನಮ್ಮ ಬಡ ಸಂಘಕ್ಕೆ ತಾವು ದಯಮಾಡಿಸಿರುವುದು, ತಮಗೆ ಕನ್ನಡದ ಮತ್ತು ಸಂಘದ ವಿಷಯದಲ್ಲಿರುವ ತೀವ್ರವಾದ ಅಭಿಮಾನವನ್ನೂ, ಪ್ರೋತ್ಸಾಹವನ್ನೂ ವ್ಯಕ್ತಗೊಳಿಸುವುದೆಂದು ನಾವು ದೃಢವಾಗಿ ನಂಬಿದ್ದೇವೆ.

ಈಗ ಸುಮಾರು ಕಾಲು ಶತಮಾನದಿಂದಲೂ ನಮ್ಮ ನಾಡಿನಲ್ಲಿ ಒಮ್ಮುಖವಾಗಿ ನಡೆಯುತ್ತಿರುವ ಕನ್ನಡ ಸಂಸ್ಕೃತಿಯ ಮತ್ತು ಕನ್ನಡ ಜನದ ಸರ್ವತೋಮುಖದ ಅಭಿವೃದ್ಧಿಯ ಪ್ರಯತ್ನಗಳ ಪರಿಣಾಮವಾಗಿ ಈಗ್ಯೆ ನಾಲ್ಕೂವರೆ ವರುಷಗಳ ಹಿಂದೆ ನಮ್ಮ ಸಂಘವು ಜನ್ಮತಾಳಿ, ಅವಶ್ಯಕಗಳಾದ ವಿವಿಧ ವಿಚಾರೋಪನ್ಯಾಸ, ಕಾವ್ಯವಾಚನ, ಸ್ಪರ್ಧೆ, ಚರ್ಚಾಗೋಷ್ಠಿ, ವ್ಯಾಸಂಗ ಗೋಷ್ಠಿ, ನಾಟಕಾಭಿನಯ, ಪುಸ್ತಕ ಪ್ರಕಟನ, ಗ್ರಾಮ ಪುನರುಜ್ಜೀವನ ಮುಂತಾದುವುಗಳ ಮೂಲಕ ಜ್ಞಾನಪ್ರಸಾರಣೆ ಮಾಡುತ್ತಾ ಬಂದಿರುವ ಅಂಶವನ್ನೂ ಸಂಘದ ಸಲುವಾಗಿ ನಮ್ಮನಾಡಿನ ಹಲವು ಉದ್ದಾಮ ಪಂಡಿತರೂ, ಉನ್ನತೋದ್ಯೋಗಿಗಳೂ ದಯಮಾಡಿ ಉಪನ್ಯಾಸಾದಿ ಕಾರ್ಯಗಳಲ್ಲಿ ಸಹಕರಿಸಿದ್ದಾರೆಂಬವಿಷಯವನ್ನೂ ತಮ್ಮ ಅವಗಾಹನೆಗೆ ತರಲು ಸಂತೋಷಿಸುತ್ತೇವೆ.

ಮುಂದೆಸಂಘವು ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿ ಜನೋಪಯುಕ್ತವಾದ ಇನ್ನೂ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ಧರಿಸಿದ್ದರೂ, ಸಾಕಾದಷ್ಟು ಧನ ಸಹಾಯವಿಲ್ಲದಿರುವುದರಿಂದ ಅವೆಲ್ಲವೂ ಕಾರ್ಯರೂಪಕ್ಕೆ ಬಾರದೆ ನಿಂತಿವೆಯೆಂದು ವಿನಯಪೂರ್ವಕವಾಗಿ ಅರಿಕೆ ಮಾಡುತ್ತೇವೆ.

ಇದುವರೆಗೆ ಸಂಘಕ್ಕೆ ಸ್ವಂತ ಕಟ್ಟಡವಿಲ್ಲದಿರುವುದರಿಂದ ಪೌರಸಭೆಯವರು ದಯಮಾಡಿ ಕೊಡಿಸಿರುವ ಪುರಭವನದ ಕೊಠಡಿಯೊಂದರಲ್ಲಿ ಕಾರ್ಯಾಲಯವನ್ನು ಇಟ್ಟುಕೊಂಡಿದ್ದೇವೆ. ಮುಂದೆ ಸಾಧ್ಯವಾದರೆ ಸ್ವಂತಕಟ್ಟಡವನ್ನು ಇಟ್ಟುಕೊಳ್ಳುವ ನಮ್ಮ ದೂರದ ಆಸೆಯನ್ನು ತಮ್ಮಸನ್ನಿಧಿಯಲ್ಲಿ ವಿಜ್ಞಾಪಿಸಿ ಬಯಸುತ್ತೇವೆ.

ಕೇಂದ್ರ ಸಂಸ್ಥೆಯಾದ ಕರ್ಣಾಟಕ ಸಾಹಿತ್ಯಪರಿಷತ್ತು ದಿನದಿನಕ್ಕೆ ಅಭಿವೃದ್ಧಿ ಪಡೆಯುತ್ತಿರುವುದೂ ತಾಯಿನುಡಿಯಾವ ಕನ್ನಡಕ್ಕೆ ನಮ್ಮ ದೇಶದ ಎಲ್ಲ ವಿದ್ಯಾನಿಲಯಗಳಲ್ಲಿಯೂ, ಪ್ರಮುಖಸ್ಥಾನ ದೊರೆಯುತ್ತಿರುವುದೂ, ತಮ್ಮ ಅಮಿತವಾದ ಕನ್ನಡಪ್ರೇಮದ ಕುರುಹುಗಳೆಂದು ನಾವು ಅರಿತಿರುತ್ತೇವೆ.

ನಮ್ಮ ಸಂಘವು ದಿನೇ ದಿನೇ ಏಳಿಗೆ ಹೊಂದುವಂತೆ ತಾವು ಆಶೀರ್ವದಿಸಬೇಕೆಂದೂ ತಮ್ಮ ಪ್ರೀತಿ ಮಮತೆಗಳು ಎಂದೂ ನಮ್ಮ ಪಾಲಿಗೆ ಇರಬೇಕೆಂದೂ ಅತ್ಯಂತ ವಿನಯದಿಂದ ಬೇಡುತ್ತೇವೆ.

ಕೊನೆಯದಾಗಿ ತಮ್ಮ ಕಾರ್ಯಗೌರವಗಳ ನಡುವೆ ಅವಕಾಶ ಕಲ್ಪಿಸಿಕೊಂಡು ನಮ್ಮ ಬಿನ್ನಹವನ್ನು ಲಾಲಿಸಿದುದಕ್ಕಾಗಿ ತಮಗೆ ನಾವು ಚಿರಋಣಿಗಳಾಗಿದ್ದೇವೆ ಮತ್ತು ನಮ್ಮನ್ನಾಳುವ ಪ್ರಭುಗಳವರಿಗೂ ರಾಜಮನೆತನದವರಿಗೂ, ತಮಗೂ, ತಮ್ಮ ಕುಟುಂಬ ವರ್ಗಕ್ಕೂ ಭಗವಂತನು ಎಲ್ಲ ಸನ್ಮಂಗಳವನ್ನೂ ದಯಪಾಲಿಸಲೆಂದು ಹಾರೈಸುತ್ತೇವೆ.

ಇಂತು ತಮ್ಮ ಶುಭ ಕಾಂಕ್ಷಿಗಳಾದ,

ಚನ್ನರಾಯಪಟ್ಟಣದ ಕರ್ಣಾಟಕ ಸಂಘದ ಸದಸ್ಯರು.

ಭದ್ರಂ-ಶುಭಂ-ಮಂಗಳಂ.

ನ್ಯಾಷನಲ್ ಪ್ರೆಸ್, ಹಾಸನ.

ಮೈಸೂರು ಸಂಸ್ಥಾನದ ದಿವಾನರವರಾದ ಅಮೀರ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಓ.ಬಿ.ಇ. ಅವರು, ಚನ್ನರಾಯಪಟ್ಟಣದ ಕರ್ನಾಟಕ ಸಂಘದವರು ಒಪ್ಪಿಸಿದ ಬಿನ್ನಹ ಪತ್ರಿಕೆಗೆ ಪ್ರತ್ಯುತ್ತರವಾಗಿ ಅಪ್ಪಣೆ ಕೊಡಿಸಿದ ಭಾಷಣ.

೧೯೩೮ನೆಯ ಇಸವಿ ನವೆಂಬರು ೧೭ನೆಯ ತಾರೀಖು.

ಮಹಾಶಯರೇ,

ಈ ಊರಿನ ಕರ್ನಾಟಕ ಸಂಘದವರು ನನ್ನನ್ನು ಆದರದಿಂದ ಬರ ಮಾಡಿಕೊಂಡು, ಬಿನ್ನಹ ಪತ್ರಿಕೆಯನ್ನು ಒಪ್ಪಿಸಿರುವುದಕ್ಕಾಗಿ ನಾನು ವಂದನೆಗಳನ್ನು ಸಮರ್ಪಿಸುವೆನು. ಅವರು ಒಪ್ಪಿಸಿರುವ ಬಿನ್ನಹ ಪತ್ರಿಕೆಯಲ್ಲಿ ನನ್ನ ವಿಷಯವಾಗಿ ಅನೇಕ ಸವಿನುಡಿಗಳನ್ನು ಸೂಚಿಸಿದ್ದಾರೆ. ಅದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ನಿಮ್ಮ ಡಿಸ್ಟ್ರಿಕ್ಟು ಕನ್ನಡ ನಾಡಿಗೇ ಅಲಂಕಾರಪ್ರಾಯವಾಗಿರುವುದೆಂಬ ನಿಮ್ಮ ಭಾವನೆಯು ಮನೋಜ್ಞವಾಗಿದೆ. ನಮ್ಮ ಕನ್ನಡನಾಡು ನಿಜವಾಗಿಯೂ ಚೆಲುವಿನ ಆಗರ. ನಿಮಗೆ ಈ ರೀತಿ ದೇಶಪ್ರೇಮವಿರುವುದನ್ನು ಕಂಡು ನಾನು ಸಂತೋಷಪಡುತ್ತೇನೆ. ಪಂಪಕವಿ ಮುಂತಾದವರ ಗ್ರಂಥಗಳನ್ನು ವ್ಯಾಸಂಗಮಾಡಿರುವವರು ನೀವು. ಅವರುಗಳು ಸೂಚಿಸಿರುವ ದೇಶಾಭಿಮಾನದ ವರ್ಣನೆಗಳನ್ನು ಓದಿ ಸಂತೋಷಪಟ್ಟಿರುವವರು ನೀವು. ಅವುಗಳನ್ನು ಓದಿರುವುದಲ್ಲದೆ, ನೀವುಗಳು ನಿಮ್ಮ ಡಿಸ್ಟ್ರಿಕ್ಟಿನಲ್ಲಿ ಪ್ರೇಮವನ್ನು ತೋರಿಸುತ್ತಿರುವುದು ನನಗೆ ನಿಜವಾಗಿಯೂ ಸಂತೋಷವನ್ನುಂಟುಮಾಡಿದೆ. ಏಕೆಂದರೆ, ಪಂಪಕವಿಯು ಬರೆದಿರುವ ಬನವಾಸಿಯ ವರ್ಣನೆಯು ಸಾಮಾನ್ಯವಾಗಿ ಕನ್ನಡನಾಡಿನ ಅನೇಕ ಭಾಗಗಳಿಗೆ ಅನ್ವಯಿಸುವಂತಿದೆ. ಅದನ್ನು ಓದಿಸಿ ಕೇಳಿ ನಾನು ಸಂತೋಷಪಟ್ಟಿದ್ದೇನೆ. ಈಗ್ಗೆ ಸಾವಿರ ವರ್ಷಗಳಿಗಿಂತಲೂ ಹಿಂದಿದ್ದ ಕವಿಯು ವರ್ಣಿಸಿ ಸಂತೋಷಪಟ್ಟ ಅಡಕೆ ತೋಟಗಳನ್ನೂ, ಕಬ್ಬಿನ ಗದ್ದೆಗಳನ್ನೂ, ವೀಳೆಯದೆಲೆಯ

ಬಳ್ಳಿಗಳನ್ನೂ, ಮಾವನ್ನೂ, ಮಲ್ಲಿಗೆಯನ್ನೂ, ಮರಿದುಂಬಿಗಳನ್ನೂ, ಗಿಳಿಗಳ ತಂಡವನ್ನೂ, ನಾವು ಅದೇ ಬಗೆಯ ಸೊಬಗಿನ ಸನ್ನಿವೇಶಗಳಲ್ಲಿ ಈಗಲೂ ನಮ್ಮ ಸಂಸ್ಥಾನದಲ್ಲಿ ಅಲ್ಲಲ್ಲಿ ಕಂಡು ಹಿಗ್ಗಬಹುದಾಗಿದೆ

ಕನ್ನಡ ಭಾಷೆಯ ಏಳಿಗೆಗಾಗಿ ಕೆಲಸ ಮಾಡುತ್ತಿರುವ ದಕ್ಷತೆಯುಳ್ಳ ಸಂಸ್ಥೆಗಳಲ್ಲಿ ನಿಮ್ಮದೂ ಒಂದು. ನಿಮ್ಮ ಸಂಘವು ನಾನಾ ರೀತಿಗಳಲ್ಲಿ ಸಾಹಿತ್ಯ ಸೇವೆಮಾಡುತ್ತಿರುವುದನ್ನು ಕೇಳಿ ನಾನು ತುಂಬ ಹರ್ಷಿಸುತ್ತೇನೆ. ಇಂಥ ಸಂಸ್ಥೆಗಳು ನಾಡಿನಲ್ಲೆಲ್ಲ ಅರಿವಿನ ಬೆಳಕನು ಹರಡುವ ಸಂಸ್ಥೆಗಳಾಗಿ ಬಹುದಾಗಿದೆ. ಈಗ ಆ ಬಗೆಯ ಕೆಲಸವೇನೋ ನಡೆಯುತ್ತಿದೆ. ಆದರೂ ಇನ್ನೂ ಹೆಚ್ಚು ಕೆಲಸ ನಡೆಯಬೇಕು. ನಮ್ಮ ದೇಶದಲ್ಲಿ ತಿಳಿವಳಿಕೆಯು ಬಹಳ ಕಡಮೆ. ನಮ್ಮಲ್ಲಿ ಹಲವರಿಗೆ ಸಾಹಿತ್ಯದಲ್ಲಿಯೂ ಮತ್ತು ಚರಿತ್ರೆಯಲ್ಲಿಯೂ ಪರಿಶ್ರಮವಿಲ್ಲ. ಹಲವರಿಗೆ ಅವರವರ ಮತದ ವಿಚಾರಗಳೇ ಗೊತ್ತಿಲ್ಲ. ವಿಜ್ಞಾನದ ತಿಳಿವಳಿಕೆಯಂತೂ ಇನ್ನೂ ಕಡಮ. ಮೇಲೆ ವಿಮಾನಗಳು ಹಾರಾಡಿದರ ನೋಡಿ ನೋಡಿ ಹಿಗ್ಗುತ್ತೇವೆ. ಹಿಗ್ಗೋಣ. ಆದರ ಅಷ್ಟು ಜನಗಳನ್ನು ಕೂರಿಸಿಕೂಂಡು ವಿಮಾನವು ಹಕ್ಕಿಯಂತೆ ಹಾರುವುದು ಹೇಗೆಂಬುದರ ವಿವರವು ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತುಂಟು ? ವಿಜ್ಞಾನ ವಿಚಾರಗಳ ತಿಳಿವಳಿಕೆಯನ್ನೂ, ಇತರ ಬಗೆ ಬಗೆಯ ವಿಚಾರಗಳ ತಿಳಿವಳಿಕೆಯನ್ನೂ ಉಪನ್ಯಾಸ ಮುಂತಾದುವುಗಳ ಮೂಲಕ ಜನರಲ್ಲಿ ಹರಡಬೇಕು. ಆ ಕೆಲಸವು ಈಗ ನಡೆಯುತ್ತಿದೆ. ಅದು ಇನ್ನೂ ಹೆಚ್ಚಾಗಿ ನಡೆಯಬೇಕೆಂಬುದು ನನ್ನ ಆಶ.

ನಿಮ್ಮ ಸಂಘವು ಇನ್ನೂ ಅಭಿವೃದ್ಧಿಹೊಂದಿ, ಕನ್ನಡ ಭಾಷೆಗ ನಿಮ್ಮಿಂದ ಇನ್ನೂ ಹೆಚ್ಚು ಹೆಚ್ಚಾಗಿ ಸೇವೆಯು ನಡೆಯಲೆಂದು ನಾನು ಹಾರೈಸುತ್ತೇನೆ.

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು. ಬೆಂಗಳೂರು.

Dewan's speech in reply to the address of welcome presented the Karnataka Sangha at Channarayapatna.

17th November 1938.

The Karnataka Sangha at Channarayapatna presented an addre of welcome to Sir Mirza Ismail, Dewan, on the occasion of his visit to the Sangha this morning. In his reply, the Dewan thanked the m bers of the Sangha very cordially for their address and the generous sentiments they had expressed about him. Those sentiments had touc him deeply.

Continuing, the Dewan said that as he listened to their addre it had been borne in upon his mind that they were justly proud of the district and the important position it had come to occupy in the Kann speaking country. He felt most happy to learn that they had entertai such deep love for their district and their State.

The Karnataka Sangha was one of those institutions in the State devoted to the development of Kannada language and literature. It was a source of great pleasure to him that the Sangha which was start ed but five years ago had developed into an institution whose various literary activities had attracted the notice of many well-known pandits and scholars. He gathered from the address that the Sangha was interest ing itself in organising debates, lectures, dramatic performances and the like, as well as in the publication of literary books and last but not least in rural propaganda. The Sangha had set an example of how such literary associations could help towards liquidating illiteracy, promoting knowledge, and, generally, towards the social and intellectual advancement of the people, especially those living in rural parts.

In conclusion, the Dewan thanked the members of the Karnataka Sangha once again for their cordial welcome and expressed his fervent wish that the Sangha would grow in prestige and influence in the years to come and thus be enabled to make a distant contribution to the development of the Kannada language and literature

To

Amin-Ul-Mulk Sir Mirza Mohamed Ismail, K.C.I.E., O.B.E.,

DEWAN OF MYSORE.

(CAMP) **HASSAN.**

Honored Sir,

We, the Members of the Town Municipal Council, Hassan, beg to offer you a most cordial welcome to our Town. We do so with a very lively sense of gratitude for all you have done for our Town and for the continuous interest you have taken in our well being.

It was our privilege to welcome you here on the 14th of April 1937, a little over a year ago, when you were good enough to honor our request to lay the foundation stone of the **Vani Vilasa Water Works.** Today we are happy to request you to perform the **Opening Ceremony of the Water Works** so auspiciously commenced. We are sensible of the high honor you are doing us, and the Electrification of the Town and the Water Works themselves will for all time be reminding our citizens of all we owe you and the Government.

Last year we took occassion to place before you the history of the many schemes of Water Supply for the Town and the final sanction of the present scheme by the Government. With your leave, therefore, we will refrain from repeating the story. The cost of the present scheme according to the estimate is Rs. 1,26,210/-. The whole scheme has been financed by Government, though half the amount namely Rs. 63,105/- is a loan to the Municipality at 4½% per annum repayable in 15 annual equated instalments.

The works are expected to provide a supply of 1,20,000 gallons per day and it is considered sufficient, on a basis of ten gallons per head, for our present population of 12,000. The four bore holes, from which water was being pumped formerly, are not now in use but will be maintained as a dependable source of additional supply when necessary.

At the time of the Electrification of the Town the Municipality gave the usual guarantee to the Government. We learn that more than the guaranteed amount is realised and there has been no occasion therefore to make up the guarantee. But, of course, it has added considerably to the working expenses of the Council. We hope, by the imposition of water tax and by the levy of fees on house connections, to meet the liability for the repayment of the loan and the maintenance of the Water Works. We realise the magnitude of the responsibilities that lie in front of us but we hope that our expectations may be fully realised. In any case, we assure you of our very best endeavour in the matter.

The comprehensive Drainage Scheme of the whole town is also under operation. One year's work has been completed and it is hoped to complete the whole scheme in another four years. The Government have been pleased to grant half the cost at Rs. 5,000/- a year, and the other half is being provided out of our current budget, and we hope you will be pleased to allow that Rs. 5,000/- a year for capital works is a fairly large sum relatively to our finances, and of course this provision for capital works is in addition to provisions that may be made from time to time out of our annual grant for public works. When the Drainage Scheme is complete 4 years hence, and this heavy liability on our annual budgets is taken away, the financial anxieties of the Council may be expected to be sensibly lighter.

Our needs and our ambitions to make the civic amenities of the town worthy of the reputation of our salubrious climate will doubtless compel us to approach you and the Government for further assistance. Our experience of your generosity will certainly give us greater courage to do so and when we find it necessary to take up that attitude, we hope that we may be able to come to you with a story of self help which would justify both past generosity and future favours.

Since we last had the pleasure of welcoming you in our midst, we had the high honor of another visit from His Highness the Maharaja of Mysore who was pleased to take up his residence here for a time. Once again His Highness was most graciously pleased to confer numerous benefits and honors of a very valuable Character. We realise that it is no easy task for us to prove worthy of the generosity of His Highness to us and his constant solicitude for our improvement and progress. We beg of you to convey to His Highness the Maharaja our assurances of deep and abiding loyalty.

In conclusion, we desire to express once again our gratitude for all the favours that have been shown to us by the Government, and to express our humble appreciation of your services and our firm confidence in yourself and the Government in all you have been doing for the progress of the State.

We now request you to kindly open the Vani Vilasa Water Works.

18th November 1938,
Hassan.

We beg to remain,
Your most Honored Sir,
Your most obedient Servants.

ಮೈಸೂರು ಸಂಸ್ಥಾನದ ದಿವಾನರವರಾದ ಅಮೀರ್–ಉಲ್–ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಓ.ಬಿ.ಇ. ಅವರು, ಹಾಸನದ ಪೌರಸಭೆಯವರು ಒಪ್ಪಿಸಿದ ಬಿನ್ನವತ್ತಳೆಗೆ ಪ್ರತ್ಯುತ್ತರವಾಗಿ ಅರ್ಪಣೆ ಕೊಡಿಸಿದ ಭಾಷಣ.

೧೯೩೮ನೆಯ ಇಸವಿ ನವೆಂಬರು ೧೮ನೆಯ ತಾರೀಖು.

ಪೌರಸಭೆಯ ಸದಸ್ಯರೇ, ಮಹಿಳೆಯರೇ ಮತ್ತು ಮಹಾಶಯರೇ,

ಸುಂದರವಾದ ನಿಮ್ಮ ಊರಿಗೆ ಬಂದಿರುವುದರಿಂದ, ನನಗೆ ಈ ದಿನ ಅತ್ಯಂತ ಹರ್ಷವುಂಟಾಗಿದೆ. ನನ್ನನ್ನು ಬಹಳ ಆದರದಿಂದ ಬರಮಾಡಿಕೊಂಡಿದ್ದೀರಿ. ಪೌರಸಭೆಯವರ ಬಿನ್ನವತ್ತಳೆಯಲ್ಲಿ ನನ್ನ ವಿಷಯವಾಗಿ ಅನೇಕ ಸವಿನುಡಿಗಳನ್ನು ಸೂಚಿಸಿದ್ದಾರೆ. ಇದಕ್ಕಾಗಿ ನನ್ನ ವಂದನೆಗಳನ್ನು ಒಪ್ಪಿಸುವೆನು.

ಹಾಸನವು, ಪ್ರಕೃತಿಸೌಂದರ್ಯದ ಆಗರವಾದ ಪ್ರದೇಶದ ಮಧ್ಯದಲ್ಲಿರುವ ಸುಂದರವಾದ ಊರು ಈ ಡಿಸ್ಟ್ರಿಕ್ಟಿನ ಕಾಫಿ ತೋಟಗಳೂ, ಏಲಕ್ಕಿ ತೋಟಗಳೂ, ಬತ್ತದ ಗದ್ದೆಗಳೂ, ತೆಂಗಿನ ತೋಟಗಳೇ ಮುಂತಾದುವೂ, ಕಣ್ಣಿಗೂ ಮನಸ್ಸಿಗೂ ಹಬ್ಬವನ್ನೊದಗಿಸುವುವು. ಬೇಲೂರು ಹಳೇಬೀಡು, ಶ್ರವಣಬೆಳಗೊಳ ಮುಂತಾದ ಸ್ಥಳಗಳಲ್ಲಿರುವ ಶಿಲ್ಪಕಲಾ ಭಂಡಾರಗಳು ನಮ್ಮ ಸಂಸ್ಥಾನದ ಹೆಮ್ಮೆಯನ್ನು ಹೆಚ್ಚಿಸುವಂತಿವೆ. ಶ್ರವಣ ಬೆಳಗೊಳದ ಹೆಸರನ್ನು ಹೇಳಿದೊಡನೆಯೇ ಗೋಮಟೇಶ್ವರನ ಸುಂದರ ಪ್ರತಿಮೆಯು ನಮ್ಮೆಲ್ಲರ ನೆನಪಿಗೂ ಬರುವುದು. ಅಷ್ಟೇ ಅಲ್ಲ. ಉತ್ತರ ದೇಶದಿಂದ ಬಂದ ಭದ್ರಬಾಹು ಮುನಿಗಳಿಗೂ ಅವರ ಶಿಷ್ಯರಿಗೂ ಆಶ್ರಯವನ್ನು ಕೊಟ್ಟ ಪುಣ್ಯದನಾಡು ನಮ್ಮದೆಂದು ಉತ್ಸಾಹ ಹುಟ್ಟುವುದು. ಚಂದ್ರಗುಪ್ತ ಚಕ್ರವರ್ತಿಯು ಕೂಡ ಬಿಜಯಮಾಡಿದ್ದ ನಾಡು ನಮ್ಮದೆಂದು ಹೆಮ್ಮೆಯುಂಟಾಗುವುದು. ಕವಿ ರನ್ನನು ಬಂದು, ಬಂಡೆಯಮೇಲೆ ಶಾಶ್ವತವಾಗಿರುವಂತೆ ತನ್ನ ಹೆಸರನ್ನು ಕೆತ್ತಿದ ನಾಡು ನಮ್ಮದೆಂದು ಆನಂದವಾಗುವುದು. ಇವೆಲ್ಲ ಭಾಗ್ಯವೂ ನಿಮ್ಮ ಡಿಸ್ಟ್ರಿಕ್ಟಿನದು. ಹೊಯ್ಸಳರ

ಕಾಲದ ಶಿಲ್ಪಕಲಾ ಕೌಶಲ್ಯದ ನಿಧಿಗಳನ್ನು ಪಡೆದಿರುವ ಖ್ಯಾತಿಯೂ ನಿಮಗೆ ಸಲ್ಲುವುದು. ಹಿಂದುಗಳ ಪವಿತ್ರಕ್ಷೇತ್ರಗಳೂ ನಿಮ್ಮ ಡಿಸ್ಟ್ರಿಕ್ಟಿನಲ್ಲಿವೆ. ಈ ಸುಂದರವಾದ ಊರು ನಿಮ್ಮ ಡಿಸ್ಟ್ರಿಕ್ಟಿನ ಮುಖ್ಯಪಟ್ಟಣ. ಇಲ್ಲಿಯ ವಾಯು ಗುಣವು ಬಹಳ ಹಿತಕರವಾದುದೆಂದು ಪ್ರಸಿದ್ಧವಾಗಿದೆ. ಈ ಊರಿನ ಸೌಂದರ್ಯವನ್ನೂ ಸೌಕರ್ಯವನ್ನೂ ಇನ್ನೂ ಹೆಚ್ಚಿಸಲು ಪೌರಸಭೆಯವರೂ, ಪುರಜನರೂ ಪ್ರಯತ್ನಿಸಬೇಕಾದುದು ಆವಶ್ಯಕ. ಸರ್ಕಾರದವರು ಸಾಧ್ಯಕಂಡ ಸಹಾಯಗಳನ್ನು ಹಿಂದೆ ಒದಗಿಸಿಕೊಟ್ಟಿದ್ದಾರೆ. ಇನ್ನು ಮುಂದಿನ ವರ್ಷಗಳಲ್ಲಿ ನಿಮ್ಮ ಆವಶ್ಯಕತೆಗಳನ್ನು ಗಮನಕ್ಕೆ ತಂದಾಗ, ಸರ್ಕಾರದವರು ಸಾಧ್ಯಕಂಡ ಸಹಾಯವನ್ನು ಅಗತ್ಯವಾಗಿಯೂ ಸಂತೋಷದಿಂದಲೂ ಮಾಡುತ್ತಾರೆ. ನಮ್ಮ ಸಂಸ್ಥಾನದ ನಗರಗಳೂ, ಊರುಗಳೂ ಮತ್ತು ಗ್ರಾಮಗಳೂ ಸಾಧ್ಯವಾದಷ್ಟು ಬೇಗ ಅಭಿವೃದ್ಧಿಸ್ಥಿತಿಗೆ ಬರಬೇಕೆಂಬುದೇ ಸರ್ಕಾರದವರ ಅಭಿಲಾಷೆ.

ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ದಿವ್ಯ ಸನ್ನಿಧಿಯಲ್ಲಿ ಪೌರಸಭೆಯವರ ರಾಜಭಕ್ತಿ ವಿಶ್ವಾಸಗಳನ್ನು ಶ್ರುತಪಡಿಸಲು ಹರ್ಷಿಸುವೆನು.

ಮಹಿಳೆಯರೇ ಮತ್ತು ಮಹಾಶಯರೇ, ಈ ಊರಿನಲ್ಲಿ ಈ ದಿನದಿಂದ ನೀರಿನ ವಸತಿಯ ಸೌಕರ್ಯವು ದೊರೆಯುತ್ತದೆ. ಇಲ್ಲಿಯ ಕಾಮಗಾರಿಗಳಿಗೆ ಕಳೆದ ವರ್ಷದ ಏಪ್ರಿಲ್ ತಿಂಗಳಿನಲ್ಲಿ ನಾನೇ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸಿದ್ದೆನು. ಕಾಮಗಾರಿಯು ಪೂರೈಸಿರುವ ಈ ದಿನ ಈ ಏಪರ್ಾಡಿನ ಆರಂಭೋತ್ಸವವನ್ನು ನೆರವೇರಿಸುವ ಸಂತೋಷವೂ ನನಗೆ ಲಭಿಸಿದೆ. ಈ ದಿನದಿಂದ ಸಮೃದ್ಧಿಯಾಗಿ ಕೊಳಾಯಿ ನೀರಿನ ಸೌಕರ್ಯ ದೊರೆಯುವುದೆಂದು ನಿಮ್ಮೆಲ್ಲರಿಗೂ ಉಂಟಾಗಿರುವ ಸಂತೋಷವನ್ನು ಕಂಡು ನಾನೂ ಸಂತೋಷಿಸುವೆನು. ಅಲ್ಲದೆ ಅದರ ಆರಂಭೋತ್ಸವವನ್ನು ನಾನು ಅತ್ಯಂತ ಹರ್ಷದಿಂದ ನೆರವೇರಿಸುವೆನು. ನಿಮ್ಮೆಲ್ಲರ ಸುಖಸಂತೋಷಗಳೂ ದಿನದಿನವೂ ವೃದ್ಧಿಹೊಂದಲೆಂಬುದೇ ನನ್ನ ಹಾರೈಕೆ.

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು—ಬೆಂಗಳೂರು.

Dewan's speech in reply to the address presented by the Town Municipal Council on the occasion of the opening of the new Water-Works at Hassan.

18th November 1938.

The Municipal Council of Hassan presented an address of welcome to Si Mirza Ismail, Dewan, on the occasion of his visit to the town to inaugurate the new Water-Works. In acknowledging the address, the Dewan thanked the mem bers of the Municipal Council very cordially both for their address and for th very warm and generous terms in which they had referred to him and his service to the State and to the Hassan town in particular.

Proceeding, the Dewan said that Hassan was a fine town surrounded a round by picturesque scenery and favoured with a salubrious climate. The coffe and caradamom estates, the vast expanse of paddy fields and the luxuriously grow cocoanut gardens in the district were a real delight to the eye. The renowned temples at Belur, Halebid, Sravanabelagola and many other places were the pride of Mysore. The mention of the name of Sravanabelagola reminded one of that exquisite work of art - the magnificent figure of Sri Gomateswara. More, the thought that Mysore is the land which afforded shelter to the sage Badrabahu and his disciples who migrated from the North was such as to evoke feelings of deep enthusiasm in the people. Students of history were aware that Emperor Chandra Gupta sojourned here and that the State possesses many carvings of Ranna, the celebrated Jain poet. The Hoysala art and architecture found its highest expression here. The Hassan District could therefore lay claim to be the home of reputed sages and poets of old and to possess invaluable works of ancient architecture.

It was essential, the Dewan said, that both the Municipal Council and the people should be up and doing to improve their town in all ways possible. The Government would be prepared in the future, as in the past, to extend every help to them in their effort to improve and beautify their town, as part of the State-wide campaign in favour of the improvement of towns and villages as a means of adding to the comfortand prosperity of the people.

Continuing, the Dewan congratulated the Municipal Council and the people warmly on the provision of a satisfactory system of the Water-Works for their

town. He laid the foundation-stone of the Works in April of last year and it was now his privilege and pleasure to declare the Works open to service. A good water-supply was a great step in the promotion of public health. He, therefore, heartily shared with them in their rejoicing at the completion of so useful and beneficial a project and hoped that it would inaugurate a new era of happiness and prosperity for the people of Hassan tow

Finally, the Dewan said that it would give him the greatest pleasure to convey their sentiments of deep loyalty and devotion to His Highness's Person and Throne to which such felicitous expression had been given in their address by the Municipal Council on behalf of the people of the town.

ಮೈಸೂರು ಸಂಸ್ಥಾನದ

ದಿವಾನ್ ಸಾಹೇಬ್ ಮೆಹರ್ಬಾನ್ ಅಖ್ತರ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್,

ಕೆ.ಸಿ.ಐ.ಇ., ಓ.ಬಿ.ಇ., ಸಿ.ಎಸ್.ಟಿ.ಜೆ., ಯವರ ಸನ್ನಿಧಾನದಲ್ಲಿ.

ಹಾಸನ ಡಿಸ್ಟ್ರಿಕ್ಟ್ ಆಲೂರು ಪೌರಸಭಾ ಸದಸ್ಯರು ವಿನಯಪೂರ್ವಕವಾಗಿ ಅರ್ಪಿಸಿದ ಬಿನ್ನವತ್ತಳೆ.

ಸ್ವಾಮಿ,

ಈ ಪೌರಸಭಾ ಸದಸ್ಯರುಗಳಾದ ನಾವುಗಳು ಕೇವಲ ಪ್ರಜಾನುರಾಗಿಗಳೂ, ಉದಾತ್ತ ಮನೋಭಾವನೆಯುಳ್ಳವರೂ, ನಮ್ಮ ಸಂಸ್ಥಾನದ ಪ್ರಧಾನ ಸಚಿವರೂ ಆದ ತಮ್ಮನ್ನು ಆದರದಿಂದ ಬರಮಾಡಿಕೊಳ್ಳುತ್ತೇವೆ.

ತಮ್ಮ ಘನ ಮುಂದಾಳುತನವೂ ಮತ್ತು ತಮ್ಮ ಕೇವಲ ಸ್ವಾರ್ಥರಹಿತ ಕಾರ್ಯತತ್ಪರತೆಯೂ, ನಮ್ಮ ಮೈಸೂರು ಪ್ರಜಾವರ್ಗದ ಮೇಲ್ಮೈಯನ್ನೂ ತಮ್ಮ ಜೀವನದ ಮುಖ್ಯ ಗುರಿಯನ್ನಾಗಿಟ್ಟುಕೊಂಡು ಅದಕ್ಕಾಗಿ ಶ್ರಮಿಸುತ್ತಿರುವುದೂ ನಮ್ಮ ಈ ಸಂಸ್ಥಾನವನ್ನು ಮಾದರಿಯನ್ನಾಗಿ ಮಾಡಿವೆ. ಅಲ್ಲದೆ ತಮ್ಮ ನೇತೃತ್ವದಲ್ಲಿ, ನಮ್ಮ ಸಂಸ್ಥಾನವು ಇತೋಪ್ಯತಿಶಯವಾಗಿ ಬೆಳೆದು, ಉನ್ನತ ಶಿಖರವನ್ನು ಏರುವುದೆಂಬ ಭರವಸೆಯು ನಮ್ಮ ಮನಸ್ಸಿನಲ್ಲಿ ರೂಢಮೂಲವಾಗಿದೆ ಸ್ವಾಮಿ.

ಈ ಸುಸಮಯದಲ್ಲಿ ನಮ್ಮ ಟರ್ವಗೆ ಸಂಬಂಧಪಟ್ಟ ಒಂದೆರಡು ಮಾತುಗಳನ್ನು ವಿಜ್ಞಾಪಿಸಲು ಅನುಜ್ಞೆಯನ್ನು ಬೇಡುತ್ತೇವೆ :—

ನೀರಿನ ಅಭಾವವು ವರ್ಷೇವರ್ಷೇ ಈ ಮುನಿಸಿಪಾಲಿಟಿಯಲ್ಲಿ ಹೆಚ್ಚಿ ಜನರ ಮನಸ್ಸಿನಲ್ಲಿ ಚಿಂತೆಯು ಅಧಿಕವಾಗಿದೆ. ಹಾಲಿ ಮುನಿಸಿಪಲ್ ಭಾವಿಗಳು ಇಪ್ಪತ್ತು ಇದ್ದರೂ ಬೇಸಿಗೆಯಲ್ಲಿ ಭಾವಿಗಳು ಬತ್ತಿ ನೀರಿನ ತೊಂದರೆಯು ಅಧಿಕವಾಗಿದೆ, ಅದರಲ್ಲೂ ಈವರ್ಷ ಕೇವಲ ಕಡಿಮೆ ಮಳೆಯಿಂದ ಈ ಕೊರತೆಯು ಘನವಾಗಿದೆ. ಅದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಘನ ಸರ್ಕಾರದವರು ದಯಪಾಲಿಸಿದ 500 ರೂಪಾಯಿಗಳೂ ಮುನಿಸಿಪಾಲಿಟಿಯವರು ಒದಗಿಸಿದ 500 ರೂಪಾಯಿಗಳೂ ಅಂತು 1,000 ರೂಪಾಯಿಗಳ ವೆಚ್ಚದಲ್ಲಿ ಒಂದು ಬೋರ್‌ವೆಲ್ ತೋಡಿಸುವ ಕೆಲಸವನ್ನು ಆರಂಭಿಸಿದೆವು. ಆದರೆ ನಮ್ಮ ದುರ್ದೈವದಿಂದ ಭಾವಿಯು 200 ಅಡಿಗಳ ಆಳಕ್ಕೆ ತೋಡಲ್ಪಟ್ಟಿದ್ದರೂ ಘಂಟೆಗೆ 500 ಗ್ಯಾಲ್ಸ್ ನೀರು ಅವಶ್ಯಕವಾಗಿರುವ ಜಾಗಾದಲ್ಲಿ ಕೇವಲ 90 ಗ್ಯಾಲ್ಸ್ ನೀರು ಮಾತ್ರ ಒದಗುತ್ತಲಿದೆ. ಈಉದ್ಯಮವು ಸಾರ್ಥಕವಾಗಲು ಬೋರ್‌ವೆಲ್ ಸಮಾಪದಲ್ಲಿ ಒಂದು "ಕರ್ಬ್ ವೆಲ್" ತೋಡಿಸಿ, ಅದರಿಂದ ನೀರನ್ನು ಎತ್ತುವ ಏರ್ಪಾಡು ನಮ್ಮ ಅಲ್ಪಮತಿಯಲ್ಲಿ ಬಂದಿರುತ್ತದೆ. ಈಕಾರ್ಯಕ್ಕೆ ಖರ್ಚು ಅಂದಾಜು ತಯಾರಾಗುತ್ತಲಿದೆ. ಘನ ಸರ್ಕಾರದವರು 5,000 ರೂಪಾಯಿಗಳ ಉದಾರ ಧನ ಸಹಾಯವನ್ನು ಮಾಡಿಸಿ, ಪುಣ್ಯ ಭಾಗಿಗಳಾಗಬೇಕೆಂದು ಬೇಡಿಕೊಳ್ಳುತ್ತೇವೆ ಸ್ವಾಮಿ.

ನಮ್ಮ ಮುನಿಸಿಪಾಲಿಟಿಯು ವರ್ಷಂಪ್ರತಿ 1,000 ರೂಪಾಯಿಗಳ ವೆಚ್ಚದಲ್ಲಿ ಟರ್ವಗೆ ಬೆಳಕನ್ನು ಒದಗಿಸುತ್ತಲಿದೆ. ಆದರೆ ನಮ್ಮ ಮುನಿಸಿಪಾಲಿಟಿಯು ಹಲವು ಉಪ ಗ್ರಾಮಗಳನ್ನು ಒಳಗೊಂಡಿರುವುದರಿಂದ ಬೆಳಕನ್ನು ತೃಪ್ತಿಕರವಾಗಿ ಒದಗಿಸಲು ಅವಕಾಶವಿರುವುದಿಲ್ಲ. ಈ ಕೊರತೆಯನ್ನು ಹೋಗಲಾಡಿಸುವಂತೆಯೂ ಕೈಗಾರಿಕೆಗಳ ಅಭಿವೃದ್ಧಿಗೆ ಸಹಕಾರವಾಗುವಂತೆಯೂ ಘನ ಸರ್ಕಾರದವರು ತಿಪಟೂರು, ಅರಸೀಕೆರೆ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಸರಪರಾಜು ಮಾಡುವ ಕಾಲದಲ್ಲಿ ನಮ್ಮ ಈಸಣ್ಣ ಗ್ರಾಮಕ್ಕೂ ವಿದ್ಯುಚ್ಛಕ್ತಿಯನ್ನು ಕೊಟ್ಟು ಅದರ ಉಪಯೋಗವನ್ನು ಜಾಗ್ರತೆ ದಯಪಾಲಿಸಬೇಕಾಗಿ ಬೇಡುತ್ತೇವೆ.

ನಮ್ಮ ಗ್ರಾಮದ ಪೇಟೆಯ ರಸ್ತೆಯ ಇಕ್ಕಡೆಗಳಲ್ಲಿಯೂ "ಫುಟ್ ಪಾತ"ನ್ನು ಹಾಕಿಸಲು ಪ್ರಯತ್ನ ನಡೆದು ಖರ್ಚು 2,500 ರೂಪಾಯಿಗಳು ಆಗಬಹುದೆಂದು ಅಂದಾಜಾಗಿದೆ. ಈ ಕೆಲಸವನ್ನು ಆರಂಭಿಸಲು ನಮ್ಮ ದಯಾಳು ಸರ್ಕಾರದವರು 500 ರೂಪಾಯಿಗಳ ಖರ್ಚನ್ನು ವಹಿಸಲು ಒಪ್ಪಿರುತ್ತಾರೆ. ಅದಕ್ಕಾಗಿ ನಮ್ಮ ಕೃತಜ್ಞತಾಪೂರ್ವಕ ಅಭಿವಂದನೆಗಳನ್ನು ತಮ್ಮಲ್ಲಿ ಅರ್ಪಿಸುತ್ತೇವೆ. ಕೆಲಸವನ್ನು ಪೂರ್ತಿಗೊಳಿಸಲು ಮತ್ತೆ 750 ರೂಪಾಯಿಗಳನ್ನು ಸರ್ಕಾರದವರು ದಯಪಾಲಿಸಬೇಕಾಗಿ ಬಿನ್ನವಿಸಿಕೊಳ್ಳುತ್ತೇವೆ ಸ್ವಾಮಿ.

ನಮ್ಮಲ್ಲಿಯ ಗರ್ಭಿಣಿ ಸ್ತ್ರೀಯರ ಮತ್ತು ಶಿಶುಗಳ ಸಂರಕ್ಷಣೆಯು ಕೇವಲ ಅವಶ್ಯಕವಾದ ಕಾರ್ಯವಾಗಿರುವುದು ಸ್ವಾಮಿ ಚಿತ್ತಕ್ಕೆ ವೇದ್ಯವಾಗಿರುತ್ತದೆ. ಇದಕ್ಕಾಗಿ ಒಂದು ಮೆಟರ್ನೆಟಿ ವಾರ್ಡನ್ನು ಕಟ್ಟಿಸಬೇಕೆಂಬ ಆಲೋಚನೆಯು ನಡೆದು ಪ್ರಸಕ್ತ ಸಾಲಿನ ಆಯವ್ಯಯದ ಪಟ್ಟಿಯ ಪ್ರಕಾರ 1,000 ರೂಪಾಯಿಗಳನ್ನು ಕಟ್ಟಡಕ್ಕಾಗಿ ತೆಗೆದಿಟ್ಟಿರುತ್ತೇವೆ ಮತ್ತೆ 1,000 ರೂಪಾಯಿಗಳ ಗ್ರಾಂಟನ್ನು ಸರ್ಕಾರದವರು ದಯಪಾಲಿಸಿ ನಮ್ಮ ಆಶೆಯನ್ನು ಈಡೇರಿಸಬೇಕಾಗಿ ಬೇಡುತ್ತೇವೆ ಸ್ವಾಮಿ.

ಈ ಮೊದಲೇ ಅರಿಕೆ ಮಾಡಿಕೊಂಡಂತೆ ಈ ನಮ್ಮ ಸಬ್ ತಾಲ್ಲೂಕನ್ನು ಪಕ್ಕ ತಾಲ್ಲೂಕನ್ನಾಗಿ ಶೀಘ್ರದಲ್ಲಿಯೇ ಮಾರ್ಪಾಟು ಮಾಡಲು ಹುಕುಂ ದಯಪಾಲಿಸಬೇಕಾಗಿ ಬಿನ್ನವಿಸುತ್ತೇವೆ. ಈ ನಮ್ಮ ಕೋರಿಕೆಯು 1-7-39ರ ಒಳಗಾಗಿ ನೆರವೇರುವುದೆಂದು ಪೂರ್ಣ ಭರವಸೆಯುಳ್ಳವರಾಗಿರುತ್ತೇವೆ ಸ್ವಾಮಿ.

ಗ್ರಾಮಾಂತರಗಳ ಪ್ರಯಾಣಸೌಲಭ್ಯಗಳ ಅಭಿವೃದ್ಧಿ ಕಾರ್ಯದಲ್ಲಿ ಆಸಕ್ತರಾದ ತಮ್ಮಿಂದ ಆಲೂರು, ಬಿಕ್ಕೋಡು ರಸ್ತೆಯು, ಅನುಮತಿಹೊಂದಿ ಕೆಲಸವು ಕಾರ್ಯರೂಪದಲ್ಲಿದೆ. ಇದಕ್ಕಾಗಿ ನಾವುಗಳು ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ತಾಲ್ಲೂಕಿನ ಜಾನುವಾರುಗಳ ರೋಗ ಚಿಕಿತ್ಸೆ, ತನ್ಮೂಲಕ ಬಡರೈತರ ಹಿತಸಾಧನೆಯ ಸಲುವಾಗಿ, ಈ ಊರಿನಲ್ಲಿ "ಪಶುವೈದ್ಯ ಶಾಲಾ"ಒಂದರ ಸ್ಥಾಪನೆಗೆ ಸರ್ಕಾರದವರ ಅನುಮತಿಯು ದೊರೆತು, ಸಭ್ಯದಲ್ಲಿಯೇ ಕಾರ್ಯಕಾರಿಯಾಗಿ ಪರಿಣಮಿಸುವುದೆಂಬ ಆಶೆಯಿದೆ ಸ್ವಾಮಿ.

ನಮ್ಮನ್ನಾಳುವ ನೃಪಕುಲತಿಲಕರಾದ ಶ್ರೀಮ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ, ರಾಜಕುಮಾರ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರಿಗೂ, ಸಚಿವೋತ್ತಮರಾಗಿ ಸರ್ವರ ಮನ್ನಣೆಗೆ ಪಾತ್ರರಾಗಿರುವ ತಮಗೂ, ಪೋಷ್ಯವರ್ಗದವರಿಗೂ, ದಯಾಮಯನಾದ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಅನಂತವಾಗಿ ಕೊಟ್ಟು ಚಿರಕಾಲ ಕಾಪಾಡಲೆಂಬದಾಗಿ ಪ್ರಾರ್ಥನೆಯನ್ನು ಸಲ್ಲಿಸುತ್ತೇವೆ ಸ್ವಾಮಿ.

ತಾ|| 19-11-1938
ಆಲೂರು.

ತಮ್ಮ ಅತ್ಯಂತ ವಿಧೇಯರು,
ಆಲೂರು ಪೌರಸಭಾ ಸದಸ್ಯರು.

ಶ್ರೀನಿವಾಸ ಪ್ರೆಸ್, ಹಾಸನ.

ಮೈಸೂರು ಸಂಸ್ಥಾನದ ದಿವಾಣರವರಾದ ಅರ್ಮಾ—ಉಲ್—ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್. ಕೆ.ಸಿ.ಐ.ಇ., ಓ.ಬಿ.ಇ. ಅವರು ಅಲೂರು ಪೌರಸಭೆಯವರು ಒಪ್ಪಿಸಿದ ಬಿನ್ನವತ್ತಳೆಗೆ ಪ್ರತ್ಯುತ್ತರವಾಗಿ ಅರ್ಪಣೆಕೊಡಿಸಿದ ಭಾಷಣ.

೧೯೩೮ನೆಯ ಇಸವಿ ನವೆಂಬರು ೧೯ನೆಯ ತಾರೀಖು.

ಪೌರಸಭೆಯ ಸದಸ್ಯರೇ, ಮಹಿಳೆಯರೇ ಮತ್ತು ಮಹಾಶಯರೇ,

ನನ್ನನ್ನು ಆದರದಿಂದ ಬರಮಾಡಿಕೊಂಡಿದ್ದೀರಿ. ಪ್ರೀತಿಯಿಂದ ಸ್ವಾಗತವನ್ನು ಬಯಸಿದ್ದೀರಿ. ನನ್ನ ಕೃತಜ್ಞತೆಯು ನಿಮ್ಮೆಲ್ಲರಿಗೂ ಸಲ್ಲ ಬೇಕಾಗಿದೆ. ಪೌರಸಭೆಯವರ ಬಿನ್ನವತ್ತಳೆಯಲ್ಲಿ ನನ್ನ ವಿಷಯವಾಗಿ ಅನೇಕ ಸಪಿನುಡಿಗಳು ಸೂಚಿತವಾಗಿವೆ. ಇದಕ್ಕಾಗಿ ನನ್ನ ವಂದನೆಗಳನ್ನು ಒಪ್ಪಿಸುವೆನು.

ನಿಮ್ಮ ಊರು ಚಿಕ್ಕದು. ಆದರೂ, ಸುಂದರವಾದ ಸನ್ನಿವೇಶ ದಲ್ಲಿದೆ. ಆದಕಾರಣ, ರಮಣೀಯವಾಗಿದೆ. ಅದಕ್ಕೆ ತಕ್ಕ ಹಾಗೆ ಆದನ್ನು ಮತ್ತಷ್ಟು ಸುಂದರವಾಗಿ ಮಾಡುವ ಶ್ರದ್ಧೆಯೂ ಪೌರಸಭೆಯವ ರಿಗಿದೆ. ಅಲ್ಲದೆ ಈ ಊರಿನ ಜನರಿಗೆ ಸೌಕರ್ಯಗಳನ್ನು ಹೆಚ್ಚಿಸುವ ಅಭಿ ಲಾಷೆಯೂ ಪೌರಸಭೆಯವರಿಗಿದೆ. ಇವೆರಡು ಅಂಶಗಳೂ ಅವರ ಬಿನ್ನ ವತ್ತಳೆಯಿಂದ ಚೆನ್ನಾಗಿ ವ್ಯಕ್ತವಾಗುತ್ತವೆ. ಅವರ ಉತ್ಸಾಹವು ದಿನ ದಿನವೂ ಹೆಚ್ಚಿ, ಅದರಿಂದ ಈ ಊರಿನವರಿಗೆ ಪ್ರಯೋಜನವಾಗಲೆಂದು ಹಾರೈಸುತ್ತೇನೆ.

ಇನ್ನು, ಪೌರಸಭೆಯವರ ಅರಿಕೆಗಳ ವಿಚಾರ. ನೀರಿನ ಸೌಕರ್ಯ ವನ್ನು ಹೆಚ್ಚಿಸುವುದು ; ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸುವುದು, ಪೇಟೆಯ ರಸ್ತೆಯ ಎರಡು ಪಕ್ಕಗಳಲ್ಲಿಯೂ ರಸ್ತೆಯುದ್ದಕ್ಕೂ ಕಾಲುನಡಿಗೆಗೆ ಸ್ಥಳವ ನ್ನೇರ್ಪಡಿಸುವುದು ; ಹೆರಿಗೆ ವಾರ್ಡನ್ನು ಕಟ್ಟಿಸುವುದು ಮುಂತಾದ ಅರಿಕೆ

ಗಳಿವೆ. ಅವುಗಳ ಸಂಬಂಧದಲ್ಲಿ ಪೌರಸಭೆಯವರು ಸರ್ಕಾರದವರ ಸಹಾಯವನ್ನು ಕೋರಿದ್ದಾರೆ. ಅವುಗಳ ಸಾಧಕಬಾಧಕಗಳನ್ನು ನಾನು ಅವರೊಡನೆ ಚರ್ಚಿಸುತ್ತೇನೆ. ಅವುಗಳನ್ನು ಇತ್ಯರ್ಥಪಡಿಸಲು ಅದೇ ಉತ್ತಮವಾದ ಮಾರ್ಗ.

ಮಹಿಳೆಯರೇ ಮತ್ತು ಮಹಾಶಯರೇ, ನಿಮ್ಮ ಊರು ದಿನದಿನವೂ ವೃದ್ಧಿಯಾಗಿ ನಿಮ್ಮ ಸುಖಸಂತೋಷಗಳು ಹೆಚ್ಚಲೆಂಬುದೇ ನನ್ನ ಹಾರ್ದಿಕ.

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು—ಬೆಂಗಳೂರು.

Dewan's speech in reply to the address of welcome presented by the Alur Municipal Council.

19th November 1938.

The Dewan made a short reply acknowledging the address of the Alur Municipal Council. He thanked the members of the Council and the other townspeople for their hearty welcome.

Alur town was a small one, the Dewan said, but its surroundings lent a peculiar charm to it. He felicitated the Municipal Council upon the keen interest they had manifested in improving the town and providing it with the most essential amenities.

The address contained a long list of wants, continued the Dewan. That was evidence of the keen desire of the people to improve the conditions in which they lived. The improvement of water supply, the extension of electricity to the town, the formation of foot-paths along the more important roads and the construction of a maternity ward were some of the representations made in the address, and the Dewan promised to have all of them considered as sympathetically as possible.

Finally, the Dewan expressed his earnest wishes for the constant and increasing prosperity of the people of Alur Town.

TO

AMIN-UL-MULK

SIR MIRZA M. ISMAIL, K.C.I.E., O.B.E., C.St.J.

DEWAN OF MYSÓRE

Sir,

WE, the Members of the Saklaspur Town Municipal Council, beg to offer you a hearty and cordial welcome on the occasion of this, your third visit to this place, as Dewan.

We are grateful to you for having accepted our humble invitation to open the Waterworks of this Town of which you so kindly, well and truly laid the foundation, in March 1937.

During your last visit to this place, we had approached you with some representations. We are happy and thankful that since then some of our prayers made then have been granted and others are under the active and sympathetic consideration of Government.

On the occasion of the laying of the foundation stone of the Engine-House, we represented to your goodself, that half the estimated cost of the scheme may be borne by Government. Government have since been pleased to order that only half the cost be debited to Municipal funds.

We also had submitted that the estimate for this scheme be got revised so as to make provision, for giving at least 200 house connections. This has been done.

Our representation for tarring the main road, fixing curb-stones, and making footpaths, has received favourable consideration. A revised estimate for Rs. 6,300 has been prepared by the Public Works Department and submitted to Government for sanction. Our Council has accepted the estimate and have agreed—as per instructions contained in your tour notes of 1937—to bear the cost of fixing curb-stones and making footpaths.

The drainage scheme, the preparation and execution of which, we craved for early consideration, has been prepared by the Bureau of Sanitary Engineering. The plan and the estimate for Rs. 25,500 have been accepted by the Council and they have been submitted to Government for sanction. We pray, Sir, that this important and urgent work may be sanctioned early and Government be pleased to grant half the cost of the scheme. The work may be executed on a five-year basis.

When all the places around us are being lighted up with electricity, our eagerness for the electrification of this town has increased by leaps and bounds. We appeal to you, Sir, to lead us light at least by next year.

As for our activities, we have tried to improve the slum area. For this purpose, we undertook to construct buildings for locating toddy and arrack shops, so that they may be removed from that locality. Here again we received the ready and willing co-operation of Government and their officers. The buildings are nearing completion and we hope to make them available to the department by the end of December of this year.

Eradication of lantana and other rank vegetation is being attended to vigilantly as lantana is a great pest in the Malnad. We are glad to say that the Public Works Department and the public are enthusiastically co-operating with us, in this matter. This is rather a severe task but none the less important.

We have provided our scavengers with free quarters and are trying to improve the housing condition of the poor especially that of the Adi-Karnatakas. We tried to complete our extension scheme for the Adi-Karnatakas by now, but had to wait for the completion of the Waterworks. Now that the Waterworks will be declared open by you to-day we hope to complete the lay-out of their extension before the end of the current year.

We have kept up the record of 100 p.c. collection of our taxes without taking recourse to coercive measures. Our budget has been again one of surplus. We are continuing to work as a family without petty factions, unnecessary sensations, and communal differences in our Council.

In conclusion, Sir, we are highly indebted to you for graciously consenting to perform this function to-day, especially when we are aware of the amount of inconvenience and trouble that has been caused to you on account of your having accepted our invitation.

We are exceedingly grateful to you, Sir, for affording us an opportunity to present you with this Address—a token of our love and admiration for your august self—and for placing our representations before you.

We beg of you to convey our most respectful assurances of loyalty and devotion to our saintly and benevolent Ruler, and the Royal Family.

We now request you, to open the Waterworks.

We beg to remain,
Sir,
Your most obedient servants,
THE MEMBERS OF THE TOWN MUNICIPAL COUNCIL,
SAKLASPUR.

SAKLASPUR,
19th November 1938.

THE BANGALORE PRESS, BANGALORE CITY

ಮೈಸೂರು ಸಂಸ್ಥಾನದ ದಿವಾ೯ರವರಾದ ಅಮಿ೯ರ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಓ.ಬಿ.ಇ. ಅವರು, ಸಕಲೇಶಪುರದ ಪೌರಸಭೆಯವರು ಒಪ್ಪಿಸಿದ ಬಿನ್ನವತ್ತಳೆಗೆ ಪ್ರತ್ಯುತ್ತರವಾಗಿ ಮಾಡಿದ ಭಾಷಣ.

೧೯೩೮ನೆಯ ಇಸವಿ ನವೆಂಬರು ೧೯ನೆಯ ತಾರೀಖು.

ಪೌರಸಭೆಯ ಸದಸ್ಯರೇ, ಮಹಿಳೆಯರೇ ಮತ್ತು ಮಹಾಶಯರೇ,

ನನ್ನನ್ನು ಆದರದಿಂದ ಬರಮಾಡಿಕೊಂಡು ಸ್ವಾಗತವನ್ನು ಬಯಸಿದ್ದೀರಿ. ಪೌರಸಭೆಯವರು ಒಪ್ಪಿಸಿದ ಬಿನ್ನವತ್ತಳೆಯಲ್ಲಿ ನನ್ನ ವಿಷಯವಾಗಿ ಅನೇಕ ಸವಿನುಡಿಗಳನ್ನು ಸೂಚಿಸಿದ್ದಾರೆ. ಅವರಿಗೂ ಮತ್ತು ನಿಮ್ಮೆಲ್ಲರಿಗೂ ಸಹ ನನ್ನ ವಂದನೆಗಳನ್ನು ಸಮರ್ಪಿಸುವೆನು.

ನಿಮ್ಮ ಊರು ಸುಂದರವಾದ ಮಲೆನಾಡು ಪ್ರದೇಶದಲ್ಲಿದೆ. ಅನೇಕರು ಇದರ ಸನ್ನಿವೇಶವನ್ನು ನೋಡಿ ಹರ್ಷಿಸುತ್ತಾರೆ. ಅದರಲ್ಲಿಯೂ ಮುಖ್ಯವಾಗಿ, ಸುಬ್ರಹ್ಮಣ್ಯದ ಜಾತ್ರೆಗೆ ಈ ಮಾರ್ಗವಾಗಿ ಹೋಗುವ ಜನರೆಲ್ಲರೂ ಈ ಮಲೆನಾಡು ಪ್ರದೇಶದ ಸೌಂದರ್ಯವನ್ನು ಕಂಡು ಹರ್ಷಿಸುತ್ತಾರೆ. ನಮ್ಮ ಸಂಸ್ಥಾನದ ಮಲೆನಾಡು ಪ್ರಾಂತವನ್ನು ನೋಡಿ ಮೆಚ್ಚದವರೇ ಇಲ್ಲ.

ಈ ದಿನದಿಂದ ಇಲ್ಲಿಯ ನಿವಾಸಿಗಳಿಗೆ ಕೊಳಾಯಿಗಳ ಮೂಲಕ ಶುದ್ಧವಾದ ನೀರು ದೊರೆಯುತ್ತದೆ. ಇದರ ಆರಂಭೋತ್ಸವವನ್ನು ನೆರವೇರಿಸುವ ಸಂತೋಷದ ಕೆಲಸವನ್ನು ನಡೆಯಿಸುವ ಸುಯೋಗವು ನನಗೆ ಲಭಿಸಿದೆ ಇದಕ್ಕಾಗಿ ನಾನು ಬಹಳವಾಗಿ ಹರ್ಷಿಸುತ್ತೇನೆ. ೧೯೩೦ನೆಯ ಇಸವಿ ಮಾರ್ಚ್ ತಿಂಗಳಿನಲ್ಲಿ ಈ ಊರಿಗೆ ಬಂದು, ಈ ಕಾಮಗಾರಿಗಳ ಅಸ್ತಿಭಾರ ಶಿಲೆಯನ್ನು ನಾನೇ ಪ್ರತಿಷ್ಠಿಸಿದ್ದೆ. ಕಾಮಗಾರಿಗಳು ಪೂರೈ

ಸಿದ ಮೇಲೆ ಆರಂಭೋತ್ಸವ ನಡೆಯಿಸುವ ಸಂತೋಷವೂ ನನಗೇ ದೊರೆತಿದೆ. ಈ ಕಾರಣದಿಂದ ನನ್ನ ಸಂತೋಷವು ಮತ್ತೂ ಹೆಚ್ಚಿದೆ.

ಪೌರಸಭೆಯವರು ಈ ಊರನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ ಬಹಳ ಉತ್ಸಾಹದಿಂದ ಕೆಲಸಮಾಡುತ್ತಿರುವುದು ಬಹಳ ಸಂತೋಷ. ಪೌರಸಭೆಯವರು ಬಡ ನೌಕರರಾದ ಝೂಡಮಾಲಿಗಳಿಗೆ ಉಚಿತವಾಗಿ ವಾಸದ ಸೌಕರ್ಯವನ್ನು ಒದಗಿಸಿರುವುದು ಅದಕ್ಕೆ ಒಂದು ನಿದರ್ಶನ. ಬಡವರ ವಾಸಕ್ಕೆ—ಅದರಲ್ಲಿಯೂ ಹರಿಜನರ ವಾಸಕ್ಕೆ—ಅನುಕೂಲಪಡಿಸುತ್ತಿರುವುದು ಮತ್ತೊಂದು ನಿದರ್ಶನ. ಇಲ್ಲಿ ಲಾಂಟಾನಾ ಮೆಳೆಗಳನ್ನೂ, ಇತರ ಅನಹ್ಯವಾದ ಗಿಡಗೆಂಟೆಗಳನ್ನೂ ನಾಶಪಡಿಸುವ ಪ್ರಯತ್ನವು ನಡೆಯುತ್ತಿರುವುದು ಅದಕ್ಕೆ ಮೂರನೆಯ ನಿದರ್ಶನ. ಹೀಗೆ ಉತ್ಸಾಹದಿಂದ ಕೆಲಸ ಮಾಡಿದರೆ, ನಾನಾ ರೀತಿಗಳಲ್ಲಿ ಊರನ್ನು ಉತ್ತಮಸ್ಥಿತಿಗೆ ತರಬಹುದು. ಕೋಮುವಾರು ಮುಂತಾದ ಯಾವ ಭೇದವೂ, ಕಕ್ಷಿಗಳೂ ಇಲ್ಲದೆ ಪೌರಸಭೆಯ ಸದಸ್ಯರೆಲ್ಲರೂ ಒಂದೇ ಕುಟುಂಬದವರಂತೆ, ಕೆಲಸಮಾಡುತ್ತಿರುವುದನ್ನು ಕೇಳಿ ನನಗೆ ಬಹಳ ಹರ್ಷವುಂಟಾಗಿದೆ. ಒಟ್ಟು ಸಂಸ್ಥಾನದಲ್ಲಿ ಸಮಸ್ತ ಪಂಗಡಗಳವರೂ ಪ್ರೀತಿ ವಿಶ್ವಾಸಗಳಿಂದ ವರ್ತಿಸಿ, ಎಲ್ಲರೂ ತಮಗೆ ಸಾಧ್ಯವಿರುವ ರೀತಿಯಲ್ಲಿ ಸಂಸ್ಥಾನದ ಸೇವೆ ಮಾಡಬೇಕೆಂಬುದೇ ಆಳುವ ಮಹಾಸ್ವಾಮಿಯವರ ನಿರೀಕ್ಷೆ; ಮಹಾಸ್ವಾಮಿಯವರ ಸರ್ಕಾರದವರ ಅಭಿಲಾಷೆ. ಪೌರಸಭೆಯ ತೆರಿಗೆಗಳೆಲ್ಲ, ನಿರ್ಬಂಧದ ವಸೂಲಿ ಕ್ರಮಗಳೇ ನಡೆಯದೆ ವಸೂಲಾಗಿವೆಯೆಂದು ಪೌರಸಭೆಯವರು ಸೂಚಿಸಿದ್ದಾರೆ. ಇದು ನಿಜವಾಗಿಯೂ ವಿಶೇಷ ಸಂತೋಷದ ವಿಷಯ. ಏಕೆಂದರೆ, ಪೌರಸಭೆಯವರು ಕೆಲಸಮಾಡುತ್ತಿರುವುದು ತಮಗಾಗಿ ಮಾತ್ರವೇ ಎಂಬುದನ್ನು ಪುರಜನರು ತಿಳಿದಿರುವುದನ್ನು ಇದು ಬಹು ಚೆನ್ನಾಗಿ ತೋರಿಸುತ್ತದೆ. ಅಲ್ಲದೆ, ಪೌರಸಭೆಯವರು ಎಷ್ಟು ಶ್ರದ್ಧೆಯಿಂದ ಕೆಲಸಮಾಡುತ್ತಿರುವರೆಂಬುದೂ ಇದರಿಂದ ವ್ಯಕ್ತವಾಗುತ್ತದೆ. ನಾನು ಪುರಜನರನ್ನೂ ಅಭಿನಂದಿಸುತ್ತೇನೆ; ಮತ್ತು ಪೌರಸಭೆಯವರನ್ನೂ ಅಭಿನಂದಿಸುತ್ತೇನೆ. ಇನ್ನು ಮುಂದೆ ಸಹ, ಅವರಲ್ಲಿ ಇದೇ ಬಗೆಯ ಸಹಕಾರವೇ ಕಂಡುಬಂದು, ಈ ಊರು ದಿನದಿನವೂ ಅಭಿವೃದ್ಧಿಯಾಗಲೆಂದು ಹಾರೈಸುತ್ತೇನೆ.

ಇನ್ನು, ಅರಿಕೆಗಳ ವಿಚಾರ. ಅವುಗಳನ್ನು ಕುರಿತು ನಾನು ಪೌರ ಸಭೆಯವರೊಡನೆ ಚರ್ಚೆಮಾಡುವೆನು. ಸಾಧ್ಯಕಂಡ ಸಹಾಯವನ್ನು ಸರ್ಕಾರದವರು ಸಂತೋಷದಿಂದ ಮಾಡುವರು.

ಪೌರಸಭೆಯವರ ಕೋರಿಕೆಯಂತೆ, ಅವರ ರಾಜಭಕ್ತಿ ವಿಶ್ವಾಸ ಗಳನ್ನು, ಆಳುವ ಮಹಾಸ್ವಾಮಿಯವರಾದ ಶ್ರೀಮಜ್ ಮಹಾರಾಜರವರ ದಿವ್ಯಸನ್ನಿಧಿಯಲ್ಲಿ ಸಂತೋಷದಿಂದ ಶ್ರುತಪಡಿಸುವೆನು.

ಮಹಿಳೆಯರೇ ಮತ್ತು ಮಹಾಶಯರೇ, ಈ ದಿನದಿಂದ ಕೊಳಾಯಿ ನೀರಿನ ಅನುಕೂಲವು ನಿಮಗೆ ದೊರೆಯುವುದಾಗಿದೆ. ಇದರಿಂದ, ನಿಮ್ಮೆಲ್ಲರಿಗೂ ಸೌಕರ್ಯ ಉಂಟಾಗಲೆಂದು ಹಾರೈಸುವೆನು.

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು—ಬೆಂಗಳೂರು.

Dewan's reply to the welcome address by the Saklespur Town Municipal Council.

19th November 1938.

Replying to the address presented by the Town Municipal Council, Saklespur, Sir Mirza Ismail, Dewan, said that the town was situated amidst beautiful surroundings typical of the malnad but what impressed him the more was the energy and activity displayed by the Municipal Council in improving it in almost every direction.

The people of Saklespur, the Dewan said, would henceforward enjoy the blessing of a pure water supply from a source where there existed no possible risk of contamination. He hoped that they all realised the advantages that would accrue to the town from the introduction of a good water supply. Personally, he felt it a great privilege to have been asked to participate in a function which meant so much to the happiness and prosperity of the people. His pleasure was enhanced by the fact that he laid the foundation-stone of the Engine-house in March last year and that it had also fallen to him to declare the Water Works open to service.

Proceeding, the Dewan said that it was a source of keen satisfaction to him to learn that the Municipal Council had been exerting to improve the town. A concrete illustration of their enthusiasm was afforded by the fact that they had provided the scavengers with free quarters. Another instance was that they were trying to improve the housing conditions of the poor, especially of the Adi-Karnatakas or Harijans as they were called in popular parlance. Yet another instance consisted in the vigilant efforts that were being made to eradicate lantana and other rank vegetation which was a great pest of the malnad areas. Above all, it gave the Dewan immense pleasure to learn that the members of the Council were inspired by the team-spirit, working as one family without petty factions or communal differences. It was the sincere hope and wish of His Highness the Maharaja, the Dewan said, that all classes of his people should in a spirit of amity and concord, each loving the other and all contributing the service of the State in every way open to them.

Another striking point in the address was, the Dewan continued, the Municipal Council had maintained the record of cent per cent collectio

taxes without resort to coercive measures of any kind. That was a matter for real satisfaction, for it indicated, as nothing else could, first, that there was a growing realisation on the part of the rate-payers that the Municipality existed and had been functioning solely for their benefit and in their interest, and secondly, that the members of the Council were inspired by commendable enthusiasm and public spirit. Both the people and the Municipal Councillors deserved to be heartily congratulated upon the fine record of achievement presented in the address.

In conclusion, the Dewan expressed his fervent hope that the Municipal Council would continue to work with the same interest, zeal and enthusiasm and that under their energetic management, the town of Saklespur would flourish more and more in the future.

The Dewan then turned on the pipe with his most earnest wishes that the new scheme of water supply might prove to be a source of health and happiness to all.

ಮೈಸೂರು ಸಂಸ್ಥಾನದ ದಿವಾ ಸಾಹೇಬರವರಾದ

ಅಮೀರ್-ಉಲ್-ಮುಲ್ಕ್ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್

ಕೆ. ಸಿ. ಐ. ಇ., ಒ. ಬಿ. ಇ., ಸಿ., ಎಸ್ಟ., ಜೆ., ಅವರ ಸನ್ನಿಧಿಯಲ್ಲಿ

ಅರಕಲಗೂಡು ಪೌರಸಭಾಸದಸ್ಯರಾದ ನಾವುಗಳು ಈ ಪುರಜನರ ಪರವಾಗಿ ಅರ್ಪಿಸಿದ

ಬಿನ್ನವತ್ತಳೆ

ಸ್ವಾಮಿ,

ತಮ್ಮಘನಸರ್ಕಾರವು ಈ ಗ್ರಾಮಕ್ಕೆ ಬೆಳೆಯಿಸಲು ನಾವುಗಳು ಹೃತ್ಪೂರ್ವಕವಾಗಿ ತಮಗೆ ಸುಭಾಗವನ ವನ್ನೆ-ಬಯಸುತ್ತೇವೆ. ತಾವು ನಮ್ಮಗಳಮೇಲೆ ಪೂರ್ಣ ಕೃಪೆಇಟ್ಟು ಈ ಗ್ರಾಮದ ಏಳಿಗೆಗಾಗಿ ಸತತವೂಮಾಡು ತ್ತಿರುವ ಉಪಕಾರಕ್ಕಾಗಿ ನಾವುಗಳು ತಮಗೆ ಪ್ರೀತಿಪೂರ್ವಕವಾಗಿ ವಂದಿಸುತ್ತೇವೆ. ತಮ್ಮಘನವಾದ ಅಧಿಕಾರಾ ವಧಿಯನ್ನು ನಮ್ಮಮಹಾಪ್ರಭುಗಳಾದ ಶ್ರೀಮ್ಮ ಮಹಾರಾಜರವರು ಇನ್ನೂಐದುವರ್ಷಗಳು ಹೆಚ್ಚಿಸಿರುವುದರಿಂದ ನಾವೆಲ್ಲರೂ ಬಹಳ ಹರ್ಷಿತರಾಗಿದ್ದೇವೆ ಸ್ವಾಮಿ.

ನಾವುಗಳು ಈ ಗ್ರಾಮದ ಏಳಿಗೆಗಾಗಿ ಸೌಕರ್ಯವನ್ನು ವದಗಿಸಲು ನಮಗ ಇರುವ ಅಲ್ಪ ವರಮಾನದಲ್ಲೇ ಕೈಲಾದಮಟ್ಟಿಗೂ ಪ್ರಯತ್ನಪಟ್ಟಿರುತ್ತೇನೆ. ಈಟ್ಯೌನಲ್ಲಿ ಈ ಹಿಂದೆಯೇ ಸುಮಾರು ಹದಿನೈದುಸಾವಿರ ರೂಪಾಯಿಗಳ ಖರ್ಚಿನಿಂದಾ ಚರಂಡಿಯನ್ನು ತಯಾರ್ಮಾಡಿಸಿರುತ್ತೇವೆ ಮತ್ತು ಮೂರುಸಾವಿರ ರೂಪಾಯಿಗಳ ಖರ್ಚಿನಿಂದಾ ಅಲ್ಲಲ್ಲಿ ಕೋಟೆ ಗೋಡೆಗಳನ್ನು ಕೆಡವಿಸಿ ಕಂದಕಗಳನ್ನು ಭರ್ತಿಹಾಕಿಸಿರುತ್ತೇನೆ. ಮುನಿಸಿಪಾಲಿಟಿಯ ಝಾಡಮಾಲಿಗಳಿಗೆ ಮನೆಕಟ್ಟಲು ಮುಫತ್ತಾಗಿ ಸೈಟುಗಳನ್ನುಕೊಟ್ಟಿರುತ್ತೇವೆ ಮತ್ತುಎಂಟುಸಾವಿರ ರೂಪಾಯಿಗಳಖರ್ಚಿನಿಂದಾ ಮೂರು ಬೋರ್‌ವೆಲ್‌ಗಳನ್ನು ತೆಗೆಸಿ ಪೇಟೆಯಲ್ಲಿ ಬೋರ್‌ವೆಲ್ಲಿನಿಂದಾಶುದ್ಧವಾದ ನೀರನ್ನು ಸರಬರಾಜು ಮಾಡುತ್ತಿರುತ್ತೇವೆ. ಈ ಬಾಬಿಗೆ 6300 ರೂಪಾಯಿಗಳು ಖರ್ಚಾಗಿ ಈ ಪೈಕಿ ಘನಸರ್ಕಾರದವರು ಅರ್ಧಮೊಬಲಗು **3150** ರೂಪಾಯಿ ಗಳನ್ನು ಉದಾರವಾಗಿ ಸಹಾಯಮಾಡಿರುತ್ತಾರೆ. ಈ ಭಾಗಕ್ಕಾಗಿ ಘನಸರ್ಕಾರದವರಿಗೆ ನಾವುಗಳು ಬಹಳ ಕೃತಜ್ಞ ರಾಗಿರುತ್ತೇವೆ. ಈ ಸಂದರ್ಭದಲ್ಲಿ ನಾವುಗಳು ಶ್ರೀಮ್ಮ ಗಂಜಾಂ ಭಾಸ್ಕರಶೆಟ್ಟರು ಉದಾರವಾಗಿ ಪೇಟೆಯಲ್ಲಿ 14 ಪಬ್ಲಿಕ್ ಫೌಂಟೆನ್ನುಗಳನ್ನು ತಮ್ಮ ಸ್ವಂತಖರ್ಚಿನಿಂದ ಕಟ್ಟಿಸಿಕೊಟ್ಟಿದ್ದಕ್ಕಾಗಿ ಅವರಿಗೆ ನಮ್ಮ ಅನಂತವಂದನೆ ಗಳನ್ನು ಸಲ್ಲಿಸುತ್ತೇವೆ ಸ್ವಾಮಿ.

ಕೋಟೆಯವರಿಗೂ ಸಹಾ ತಾಲ್ಲೂಕು ಆಫೀಸು ಕಾಂಪೌಂಡಿನಲ್ಲಿರುವ ಬೋರ್‌ವೆಲ್ಲಿನಿಂದಾ ಶುದ್ಧವಾದ ನೀರನ್ನು ಸರಬರಾಜುಮಾಡಲು **5600** ರೂಪಾಯಿಗಳಿಗೆ ಒಂದು ಸ್ಕೀಮು ತಯಾರ್ಮಾಡಿಸಿ ಈಬಾಬಿಗೂ ಸಹಾ ಘನ ಸರ್ಕಾರದವರು ಉದಾರವಾಗಿ ಅರ್ಧಹಣ ಸಹಾಯಮಾಡಿರುತ್ತಾರಾಗಿ ನಮ್ಮ ಅನಂತವಂದನೆಗಳನ್ನು ಅರ್ಪಿಸುತ್ತೇವೆ ಆವರೆ ಈಬೋರ್‌ವೆಲ್ಲಿನ ನೀರು ಉಪ್ಪಾಗಿರು ವುದರಿಂದಾ ಬೇರೆ ಸಿಹಿನೀರನ್ನು ಸಪ್ಲೈಮಾಡಲು ಅಂದಾಜ ತಯಾರ್ಮಾಡಿಸಿ ಕೊಡಬೇಕಾಗಿ ಸ್ಯಾನಿಟೆರಿ ಇಂಜನಿಯರ್‌ರವರನ್ನು ಪ್ರಾರ್ಥಿಸಿರುತ್ತೇವೆ. ಶೀಘ್ರವಾಗಿಯೇ ಈ ಕೆಲಸ ನಡೆಸಲು ಘನ ಸರ್ಕಾರದವರು ಅಪ್ಪಣೆಕೊಡಿಸಬೇಕಾಗಿ ಪ್ರಾರ್ಥಿಸುತ್ತೇವೆ ಸ್ವಾಮಿ.

ಈ ಟ್ಯೌನಿಗೆ ವಿಧ್ಯುಚ್ಛಕ್ತಿಯನ್ನು ತರಿಸಲು ಈಗ್ಯೆ ಮೂರುವರ್ಷಗಳಲಾಗಾಯ್ತು ಕಾತುರ ಪಡುತ್ತಿರು ತ್ತೇವೆಯಾಗಿ ಘನಸರ್ಕಾರದವರು ಸಾಧ್ಯವಾದಷ್ಟು ಜಾಗ್ರತೆಯಾಗಿ ನಮ್ಮ ಅಪೇಕ್ಷೆಯನ್ನು ಈಡೇರಿಸಿಕೊಡಬೇಕಾಗಿ. ದೈನ್ಯದಿಂದ ಬೇಡಿಕೊಳ್ಳುತ್ತೇವೆ ಸ್ವಾಮಿ.

ಈ ಟ್ಯೌ ಪೇಟೆ ಮತ್ತು ಕೋಟೆಗೆ ಮಧ್ಯದಲ್ಲಿರುವ ದೊಡ್ಡಕೆರೆಯಲ್ಲಿ ವಿಶೇಷವಾಗಿ ತಾವರೆ ಮತ್ತು ಶತ್ತೆ ಬೆಳೆದು ಗೋಡು ಭರ್ತಿಯಾಗಿ ನೀರೆಲ್ಲಾ ಕೆಟ್ಟುಹೋಗಿ ಮಲೇರಿಯಾಪಾಯಿಲೆಗೆ ಕಾರಣವಾಗಿರುತ್ತೆಯಾಗಿ ಈ ಕೆರೆ ಯನ್ನು ಪಾಕುಮಾಡಿಸುವುದು ಮುನಿಸಿಪಾಲಿಟಿಯವರಿಗೆ ಅಸಾಧ್ಯವಾದ ಕೆಲಸವಾಗಿರುತ್ತೆ. ಈ ಕಾರಣ ಕೋಟೆಗೆ ನೀರು ಸರಬರಾಜಾದಕೂಡ್ಲೆ ಘನಸರ್ಕಾರದವರು ಈ ಕೆಲಸವನ್ನು ಮಾಡಿಸಿಕೊಟು, ನಮ್ಮಗಳನ್ನು ಉದಾರ ಮಾಡಬೇಕಾಗಿ ಬೇಡಿಕೊಳ್ಳುತ್ತೇವೆ ಸ್ವಾಮಿ.

ನಮ್ಮರಾಜರ್ಷಿಗಳಾದ **ಶ್ರೀಮ್ಮ ಮಹಾರಾಜರವರಲ್ಲಿ** ನಮಗಿರುವ ನಿಶ್ಚಲವಾದ ರಾಜಭಕ್ತಿಯನ್ನು ತಮ್ಮ ಮೂಲಕ ಅರಿಕೆಮಾಡಿಕೊಳ್ಳುತ್ತೇವೆಯಾಗಿ ತಾವು ಕೃಪೆಇಟ್ಟು ನಮ್ಮ **ಮಹಾಪ್ರಭುಗಳಿಗೆ** ಈ ವಿಷಯವನ್ನು ಅರಿಕೆ ಮಾಡಲು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇವೆ ಸ್ವಾಮಿ

ಅರಕಲಗೂಡು,

ತಾರೀಖು 20—11—1938

ತಮ್ಮ ಅತ್ಯಂತ ವಿಧೇಯರುಗಳಾದ,

ಅರಕಲಗೂಡು ಪೌರಸಭಾ ಸದಸ್ಯರುಗಳು.

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಸ್ಥಾನದ ದಿವಾನರವರಾದ ಅವಿರ್ಜಾ-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಓ.ಬಿ.ಇ. ಅವರು, ಅರಕಲಗೂಡು ಪೌರಸಭೆಯವರ ಬಿನ್ನವತ್ತಳೆಗೆ ಪ್ರತ್ಯುತ್ತರವಾಗಿ ಅಪ್ಪಣೆ ಕೊಡಿಸಿದ ಭಾಷಣ.

೧೯೩೮ನೆಯ ಇಸವಿ ನವೆಂಬರು ೨೦ನೆಯ ತಾರೀಖು.

ಪೌರಸಭೆಯ ಸದಸ್ಯರೇ, ಮಹಿಳೆಯರೇ ಮತ್ತು ಮಹಾಶಯರೇ,

ಈ ದಿನ ನಿಮ್ಮೊಡನೆ ಸೇರಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಪೌರಸಭೆಯವರು ಬಿನ್ನವತ್ತಳೆಯನ್ನು ಒಪ್ಪಿಸಿದ್ದಾರೆ. ಆದರದಿಂದ ಸ್ವಾಗತವನ್ನು ಬಯಸಿದ್ದಾರೆ. ನನ್ನ ವಿಷಯವಾಗಿ ಸವಿನುಡಿಗಳನ್ನು ಸೂಚಿಸಿ ಶುಭವನ್ನು ಕೋರಿದ್ದಾರೆ. ಇದಕ್ಕಾಗಿಯೂ. ನನ್ನನ್ನು ಆದರದಿಂದ ಬರಮಾಡಿಕೊಂಡಿರುವುದಕ್ಕಾಗಿಯೂ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ.

ಪೌರಸಭೆಯವರು ಬಹಳ ಆಸಕ್ತಿಯನ್ನು ವಹಿಸಿ ಊರನ್ನು ಅಭಿವೃದ್ಧಿ ಸ್ಥಿತಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ಇದನ್ನು ಕಂಡು ಹರ್ಷಿಸುತ್ತೇನೆ. ಪುರಜನರಿಗೆ ಒದಗಿಸಿರುವ ಸೌಕರ್ಯಗಳಿಂದ ಅವರಿಗೆ ತುಂಬ ಪ್ರಯೋಜನವಾಗಿರಲೇಬೇಕು. ಉತ್ತಮವಾದ ಚರಂಡಿಗಳನ್ನು ಮಾಡಿಸಿ, ಕೋಟೆ ಗೋಡೆಗಳನ್ನು ಕೆಡವಿಸಿರುವುದರಿಂದ, ಊರು ಹೊಕ್ಕಟವಾಗಿರುವುದಕ್ಕೆ ವಿಶೇಷ ಸಹಾಯವಾಗಿದೆ. ಅಲ್ಲದೆ ಸೊಳ್ಳೆಗಳ ಪಡೆಯು ವೃದ್ಧಿಯಾಗುವುದು ತಪ್ಪಿದೆ. ಅದರಿಂದ ಮಲೇರಿಯಾ ಜ್ವರದ ಬಾಧೆಯು ಕಡಮೆಯಾಗಲು ಸಹಾಯವಾಗುತ್ತದೆ. ಪೌರಸಭೆಯವರು ತಮ್ಮ ನೌಕರರಾದ ಝಾಡಮಾಲಿಗಳಿಗೂ, ಗುಡಿಸುವವರಿಗೂ, ಮನೆಗಳ ನಿವೇಶನಗಳನ್ನು ಉಚಿತವಾಗಿ ಕೊಟ್ಟು ಸಹಾಯ ಮಾಡಿದ್ದಾರೆ. ಪೇಟೆಗೆ ಶುದ್ಧವಾದ ನೀರು ದೊರೆಯುವಂತೆ ಮಾಡಿದ್ದಾರೆ. ಕೋಟೆಯ ಪ್ರದೇಶಕ್ಕೂ ಅದೇ ಸೌಕರ್ಯವೇ ದೊರೆಯುವಂತೆ ಮಾಡಲಿಚಿಸುತ್ತಾರೆ. ಈ ಬಗೆಯ ಸೌಕರ್ಯಗಳನ್ನು ಕಲ್ಪಿಸಿರುವುದನ್ನು ನೋಡಿದರೆ ಪೌರಸಭೆಯವರ ಶ್ರದ್ಧೆಯು

ಎಷ್ಟು ಮಟ್ಟಿನದೆಂಬುದು ವ್ಯಕ್ತವಾಗುತ್ತದೆ. ಹೀಗೆ ಕೆಲಸ ಮಾಡುತಿರುವುದಕ್ಕಾಗಿ ಅವರನು ಅಭಿನಂದಿಸುವೆನು.

ಶ್ರೀಮಾನ್ ಭಾಸ್ಕರಯ್ಯಶೆಟ್ಟಿಯವರು ಪೇಟೆಯ ಪ್ರದೇಶದಲ್ಲಿ ತಮ್ಮ ಸ್ವಂತ ಪೆಚ್ಚದಲ್ಲಿ ಹದಿನಾಲ್ಕು ಕೊಳಾಯಿಗಳನ್ನಿಡಿಸಿ ಕೊಟ್ಟಿರುವುದನ್ನು ಕೇಳಿ, ನನ್ನ ಮನಸ್ಸಿಗೆ ಬಹಳ ಹರ್ಷವುಂಟಾಯಿತು. ಅವರಿಗೆ ಪುರಜನರು ಕೃತಜ್ಞರಾಗಿರಬೇಕಾಗಿದೆ. ಇಂಥ ಪರೋಪಕಾರಿಗಳಿಂದ ಊರಿಗೇ ಒಂದು ಅಲಂಕಾರ. ಯಾವನಿಂದ ಹಲವರಿಗೆ ಸಹಾಯವಾಗುವುದೋ ಅವನ ಜೀವನವೇ ಸಾರ್ಥಕವೆಂದು ಒಬ್ಬ ಕವಿಯು ಹೇಳಿದ್ದಾನೆ. ಆ ದೃಷ್ಟಿಯಿಂದ ನೋಡಿದರೆ ಶ್ರೀಮಾನ್ ಭಾಸ್ಕರಯ್ಯಶೆಟ್ಟಿಯವರಂಥವರ ಜೀವನವು, ಶ್ರೇಷ್ಠವಾದ ಮತ್ತು ಸಾರ್ಥಕವಾದ ಜೀವನ

ಇನ್ನು ಪೌರಸಭೆಯವರ ಅರಿಕೆಗಳ ವಿಚಾರ. ಅವುಗಳ ವಿಷಯದಲ್ಲಿ ನಾನು ಈಗ ಏನನ್ನೂ ಹೇಳಲಿಚ್ಛಿಸುವುದಿಲ್ಲ. ಅವುಗಳ ವಿಷಯವನ್ನು ನಾನು ಪೌರಸಭೆಯ ಸದಸ್ಯರೊಡನೆ ಚರ್ಚಿಸುವೆನು. ಸಾಧ್ಯಕಂಡ ಸಹಾಯವನ್ನು ಸರ್ಕಾರದವರು ಮಾಡುವರು.

ಆಳುವ ಮಹಾನ್ವಾಮಿಯವರಾದ ಶ್ರೀಮನ್ಮಹಾರಾಜರವರ ದಿವ್ಯ ಸನ್ನಿಧಿಯಲ್ಲಿ ಪೌರಸಭೆಯವರ ರಾಜಭಕ್ತಿ ವಿಶ್ವಾಸಗಳನ್ನು ಸಂತೋಷದಿಂದ ಶ್ರುತಪಡಿಸುವೆನು.

ಮಹಿಳೆಯರೇ ಮತ್ತು ಮಹಾಶಯರೇ, ನನ್ನನ್ನು ಆದರದಿಂದ ಬರಮಾಡಿಕೊಂಡು ಸ್ವಾಗತವನ್ನು ಬಯಸಿರುವುದಕ್ಕಾಗಿ ನಿಮ್ಮೆಲ್ಲರಿಗೂ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುವೆನು. ನಿಮ್ಮ ಸುಖ ಸಂತೋಷಗಳು ದಿನದಿನವೂ ವೃದ್ಧಿಯಾಗಲೆಂದು ಹಾರೈಸುವೆನು.

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು.—ಬೆಂಗಳೂರು.

Dewan's reply to the welcome address by the Municipal Council, Arkalgud, Hassan District.

(20th November 1938).

Replying to the address of welcome presented by the Municipal Council on the occasion of his visit to Arkalgud, Sir Mirza Ismail, Dewan, felicitated them on the keen interest which they had been taking to improve their town. Their record of achievements was a matter for sincere gratification. They had built drains for the town at a cost of Rs.15,000/-, had demolished the unsightly fort walls at a cost of Rs.3,000/- and had done away with uncovered accumulations of water, which were the breeding places of mosquitoes. The provision of an efficient drainage was a great step in the prevention of malaria, verily one of the scourges of the malnad. It was a matter for satisfaction, too, that the Municipal Council had granted free sites to the scavengers and sweepers. On the top of all, they had provided a protected water-supply for the Petta portion of the town from a bore-well put up at a cost of about Rs.6000/-, half of which represented the grant from the Government. Indeed, these works of improvement testified to the enthusiasm and energy displayed by the Municipal Council in the discharge of their duty by the rate-payers.

Proceeding, the Dewan congratulated Mr. Ganjam Bhaskaraiah Setti on the provision at his own cost of 14 public fountains in the Petta. It was said in the Rig Veda: "Amrita is in waters; in the waters there is healing balm." So, one could not be too thankful to Mr. Bhaskaraiah Setti for his public spirit which found expression in such a useful gift.

Finally, the Dewan thanked the members of the Municipal Council very cordially for their warm welcome and for the generous terms in which they had referred to him in their address. He expressed his best wishes for the happiness of the people and the prosperity of their town.

ಮೈಸೂರು ಸಂಸ್ಥಾನದ ದಿವಾ ಸಾಹೇಬರವರಾದ

ಅಮೀರ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್,

ಕೆ. ಸಿ. ಐ. ಇ., ಬಿ. ಬಿ., ಇ. ಸಿ., ಎಸ್ ಟಿ., ಜೆ., ಅವರ ಸನ್ನಿಧಾನಂಗಳಲ್ಲಿ

ಅರಕಲಗೂಡು ತಾಲ್ಲೂಕು ಕೊಣನೂರು ಪೌರಸಭಾ ಅಧ್ಯಕ್ಷರು ಮತ್ತು
ಸದಸ್ಯರುಗಳು ಸಹ ಅರ್ಪಿಸಿದ

ಬಿನ್ನವತ್ತಳೆ

ಸ್ವಾಮಿ

ಈ ದಿವಸ ನಾವುಗಳು ಈ ಪೌರಸಭೆಯಪರವಾಗಿ ಈ ಬಿನ್ನವತ್ತಳೆಯನ್ನು ಅರ್ಪಿಸಲು ತಮ್ಮ ಅಪ್ಪಣೆಯನ್ನು ಬೇಡುತ್ತೇವೆ.

ಮೈಸೂರು ಸಂಸ್ಥಾನದ ದಿವಾ ಸಾಹೇಬರವರು ಈ ಟೌನಿಗೆ ದಯಮಾಡಿಸಿರುವುದು ಇದೇ ಮೊದಲನೆಯಸಾರೀ ಆದ್ದರಿಂದ ಈ ದಿವಸವನ್ನು ಅತ್ಯಂತ ಶುಭದಿವಸವೆಂದು ನಾವು ಭಾವಿಸಿರುವ ಕಾರಣ ಸುವರ್ಣಾಕ್ಷರದಲ್ಲಿ ಇದನ್ನು ಚಿತ್ರಿಸಬಹುದಾಗಿದೆ.

ಈ ತಮ್ಮ ಆಗಮನವು ಮುಂದೆ ಪದೇಪದೇ ಈ ಟೌನಿಗೆ ತಾವು ದಯಮಾಡಿಸುವ ಶುಭಸೂಚನೆ ಆಗಿರಲೆಂದು ನಾವುಗಳು ಹಾರೈಸುತ್ತೇವೆ ಸ್ವಾಮಿ. ತಮ್ಮ ಈ ವರಿಗಿನ ಅಧಿಕಾರದ ಅವಧಿಯಲ್ಲಿ ನಮ್ಮ ಸಂಸ್ಥಾನವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿರುವುದನ್ನು ನಾವುಗಳು ಬಹಳ ಸಂತೋಷದಿಂದಲೂ, ಮತ್ತು ಹೆಮ್ಮೆಯಿಂದಲೂ ಸಹ ಹೇಳುತ್ತೇವೆ. ತಮ್ಮ ರಾಜತಂತ್ರನಿಪುಣತೆಯೂ, ರಾಜ್ಯಾಡಳಿತದ ವಿಚಕ್ಷಣೆಯೂ, ಅಪಾರವಾದ ವಿಶಾಲದೃಷ್ಟಿಯಿಂದ ಕೂಡಿದ ಅನುಭವವೂ ಇವೆಲ್ಲಕ್ಕೂ ಮೇಲೆನಿಸಿದ ಕಡುಬಡವರು ಮತ್ತು ಹಳ್ಳಿಯವರಾದ ರೈತಾಪಿಜನರಮೇಲೆ ತಮಗೆ ಇರುವ ಅಪಾರವಾದಪ್ರೀತಿಯೂ ಇಡೀ ಸಂಸ್ಥಾನದ ಜನ ಸಮುದಾಯದ ಪ್ರೀತಿಯನ್ನೇ ಅಂತಃಪೂರ್ವಕವಾಗಿ ಸಂಪಾದಿಸಿರುವುದಲ್ಲದೆ ತಮ್ಮ ಹೆಸರು ಪ್ರತಿಯೊಬ್ಬರ ಮನೆಮಾತಾಗಿದೆ. ತಮ್ಮ ಸೇವಾರ್ಥವು ಇಲ್ಲಿಗೆ ಈ ದಿವಸ ದಯಮಾಡಿಸಲು ತಮಗೆ ಹೃತ್ಪೂರ್ವಕವಾಗಿ ಸುಖಾಗಮನವನ್ನು ಬಯಸುತ್ತೇವೆ. ನಮ್ಮ ಈ ಟೌನ್ ಕೊಡಗುಸರಹದ್ದಿನಲ್ಲಿ ಸಮುದ್ರಮಟ್ಟಕ್ಕೆ **2600** ಅಡಿ ಎತ್ತರದಲ್ಲಿದ್ದು **3000** ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಈ ಟೌನ್ **1925** ನೇ ಇಸವಿಯಲ್ಲಿ ಪೌರಸಭೆಯಾಗಿ ಪರಿಗಣಿಸಲ್ಪಟ್ಟಾಗ ಇದರ ವಾರ್ಷಿಕ ವರಮಾನವು **5000** ರೂಪಾಯಿ ಮಾತ್ರವಾಗಿತ್ತು. ಈಚೆಗೆ ಈ ಉತ್ಪತ್ತಿಯನ್ನು ನಮ್ಮ ಸಕಲ ಪ್ರಯತ್ನಗಳಿಂದ **8000** ರೂಪಾಯಿನವರೆಗೆ ಏರಿಸಿರುತ್ತೇವೆ. ಈ ಅತ್ಯಲ್ಪಕಾಲದಲ್ಲಿ ಪೌರಸಭೆಯು ಶಾಶ್ವತವಾದ **30** ಸಾವಿರ ರೂಪಾಯಿಗಳ ಅಂದಾಜಿನ ಖಾಯಂ ಕೆಲಸಗಳನ್ನು ನಡೆಸಿರುತ್ತದೆ. ಈ ಪೈಕಿ ಧನಸಹಾಯದವರು **10** ಸಾವಿರ ರೂಪಾಯಿಗಳನ್ನು ವುದಾರವಾಗಿ ಸಹಾಯಮಾಡಿರುತ್ತಾರೆ. ಈ ಟೌನಿಗೆ ಕಾವೇರಿನದಿಯಿಂದ ಶುದ್ಧವಾದ ನೀರಿನ ಸರಬರಾಯಿಮಾಡಲು **1935** ನೇ ಇಸವಿಯಲ್ಲಿ ಒಂದು ಅಂದಾಜು ತಯಾರಿಸಿ **26** ಸಾವಿರ ರೂಪಾಯಿಗಳ ಖರ್ಚಿನಿಂದಾ **1936** ನೇ ಇಸವಿಯಲ್ಲಿ ಕೆಲಸವನ್ನು ಮುಗಿಸಿರುತ್ತೇವೆ. ಈ ಅಂದಾಜು ಮೊಬಲಗಿನ ಪೈಕೀ ಪೌರಸಭೆಯವರು **16** ಸಾವಿರ ರೂಪಾಯಿಗಳನ್ನೂ ಧನಸಹಾಯದವರು ಮೇಲ್ಕಂಡ ಮೇರೆ ಕೊಟ್ಟ **10** ಸಾವಿರ ರೂಪಾಯಿಗಳನ್ನು ಸೇರಿಸಿ ಕೆಲಸನಡಿಸಿದ್ದಾಗಿರುತ್ತೆ. ರಸ್ತೆಗಳನ್ನು ಹೆಚ್ಚಿಸುವುದು ಕೋಟೆಯನ್ನು ಕೆಡವಿಸಿ ಕಂದಕಗಳನ್ನು ಮುಚ್ಚಿಸುವುದು. ಗ್ರಾಮ ನಿವೇಶನಕ್ಕೋಸ್ಕರ ಜಮೀನುಗಳನ್ನು ಕೊಂಡು ಕೊಂಡು ಹರಿಜನ ಕುಟುಂಬಗಳಿಗೆ ಮನೆಗಳನ್ನು ಕಟ್ಟಲು ನಿವೇಶನಗಳನ್ನು ಉಚಿತವಾಗಿ ಕೊಟ್ಟಿರುವುದು ಈ ಕೆಲಸಗಳನ್ನು ಪುರೋಭಿವೃದ್ಧಿಗಾಗಿ ಮಾಡಿರುತ್ತೇವೆ ಸ್ವಾಮಿ. ಈ ಮೇಲೆಕಂಡ ಕೆಲಸಗಳನ್ನೆಲ್ಲಾ ಈ ಮುನಸಿಪಾಲಿಟಿಯ ಸಾಮಾನ್ಯ ಆಡಳಿತದ ಖರ್ಚಿಗೆ ತೊಂದರೆಇಲ್ಲದಂತೆ ನಿರ್ವಹಿಸಿರುತ್ತೇವೆಂತ ಅರಿಕೆಮಾಡಲು ಹರ್ಷಿಸುತ್ತೇವೆ ಸ್ವಾಮಿ. ಈ ಟೌನಿನ ಏಳಿಗೆಗೆ ಅಗತ್ಯವಾಗಿ ಅವಶ್ಯಕವಿರುವ ಬೇಡಿಕೆಗಳನ್ನು ಸನ್ನಿಧಾನದಲ್ಲಿ ಅರಿಕೆಮಾಡಿಕೊಳ್ಳಲು ಅತಿವಿನಯವಾಗಿ ತಮ್ಮ ಅನುಮತಿಯನ್ನು ಬೇಡಿದ್ದೇವೆ.

ಸಾರ್ವಜನಿಕ ಕೊಳಾಯಿಗಳ ಹತ್ತಿರ ನೀರು ನಿಂತು ಕೆಡುತ್ತಾ ಇರುವುದರಿಂದ ಈ ಟೌನಲ್ಲಿ ಮೊದಲಿಗಿಂತಲೂ ಹೆಚ್ಚಿಗೆ ಮಲೇರಿಯಾ ಖಾಯಿಲೆಯು ಪ್ರಬಲಿಸಿರುತ್ತೆ. ಈಬಗ್ಯೆ ಈ ಟವ್ನಗೆ ಸುವ್ಯವಸ್ಥಿತವಾದ ಚರಂಡಿಯನ್ನು ಕಟ್ಟಿಸುವ ವಿಷಯವು ಸ್ಯಾನಿಟರಿ ಇಂಜನೀಯರವರ ಪರ್ಯಾಲೋಚನೆಯಲ್ಲಿರುತ್ತೆ. ಈಬಗ್ಯೆ ನಮ್ಮ ಧನಸಹಾಯದವರು ಕೃಪೆಇಟ್ಟು ಉದಾರವಾಗಿ ಈ ಅಂದಾಜು ಪೈಕಿ ಅರ್ಧ ಮೊಬಲಗನ್ನು ಗ್ರಾಂಟಾಗಿಯೂ, ಉಳಿಕೆಯ ಅರ್ಧ ಮೊಬಲಗನ್ನು ಆರು ವರ್ಷದಲ್ಲಿ ವಾಪಸುಕೊಡುವ ಷರತ್ತಿಗೆ ಒಳಪಡಿಸಿ ಸಾಲವಾಗಿ ಕೊಟ್ಟು, ಈ ಚರಂಡಿಯ ಕಾಂಗಾರಿಯನ್ನು ಜಾಗ್ರತೆ ಮಾಡಿಸಿಕೊಡಲು ಪ್ರಾರ್ಥಿಸುತ್ತೇವೆ ಸ್ವಾಮಿ.

ಈ ಟವ್ನ—ನವೀನ ಸೌಕರ್ಯವಿರುವ ಸ್ಥಳಗಳಿಗೆ ಬಹಳ ದೂರದಲ್ಲಿರುವುದರಿಂದ ಈ ಸ್ಥಳಕ್ಕೆ ಒಂದು ಹೆರಿಗೆ ಆಸ್ಪತ್ರೆಯು ಅತ್ಯವಶ್ಯಕವಾದ ವ್ಯಾಗಿರುತ್ತೆ. ಇದಕ್ಕಾಗಿ ಈ ಊರಿನ ಶ್ರೀಮಾ ಬೆಳಗೋಡು ವೆಂಕಟರಂಗಶೆಟ್ಟರು ಉದಾರವಾಗಿ **5000** ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಡುವುದಾಗಿ ಪಾಗ್ದಾನಮಾಡಿರುತ್ತಾರಾಗಿ ನಾವುಗಳು ಅವರಿಗೆ ಚಿರಋಣಿಗಳಾಗಿರುತ್ತೇವೆ. ಧನಸಹಾಯದವರು ದಯವಿಟ್ಟು ಕೂಡಲೆ ಈ ಹೆರಿಗೆ ಆಸ್ಪತ್ರೆಯನ್ನು ಸ್ಯಾಂಕ್ಷನ್ ಮಾಡಿಸಿಕೊಟ್ಟು, ಮೈಸೂರು ದೇಶದ ಕೊನೆಯ ಗಡಿಯಾದ ಒಂದುಮೂಲೆಯಲ್ಲಿರುವ ಬಡತಾಯಿಯರ ಕಷ್ಟವನ್ನು ನಿವಾರಣೆಮಾಡಿಸಿಕೊಡಬೇಕಾಗಿ ಬೇಡಿದ್ದೇವೆ ಸ್ವಾಮಿ.

ಈ ಟವ್ನಲ್ಲಿ ಅಭಿವೃದ್ಧಿಗೆ ಮುಖ್ಯಕಾರಣವಾಗಿದ್ದ ವ್ಯಾಪಾರವು ಈ ಟವ್ನಿನ **5** ಮೈಲಿಯ ಪರಿಸ್ತರಣದ ಒಳಗೇನೇ **3** ಟೋಲ್ ಗೇಟುಗಳು ಇದ್ದು, ಈ ಟವ್ನ ಒಳಕ್ಕೆ ವ್ಯಾಪಾರಕ್ಕಾಗಿ ಬರುವ ಪ್ರತಿಯೊಂದು ಗಾಡಿಗೂ ಹೋಗಿಬರುವುದಕ್ಕೆ **2—2—0** ಸುಂಕ ಪಾವತಿಮಾಡಬೇಕಾಗಿರುವ ಕಾರಣ ಈಚೀಜೆಗೆ ವ್ಯಾಪಾರವು ಬಹಳ ಹೀನಸ್ಥಿತಿಗೆ ಬಂದಿರುತ್ತೆ. ಈ **3** ಟೋಲ್ ಗೇಟುಗಳ ಪೈಕಿ ಕೊಡಗಿನ ಫ್ರಾಂಟಿಯರ್ ಟೋಲ್ ಅನಿರ್ವಾಹದ ಹೊರೆಯಾಗಿರುತ್ತೆ. ಈ ಕಾರಣಕ್ಕಾಗಿ ಧನಸಹಾಯದವರು ಮೈಸೂರು ಸ್ಟೇಟ್ ಫ್ರಾಂಟಿಯರ್ ಟೋಲ್ ಗೇಟನ್ನು ಈ ಟವ್ನ ಮುನಿಸಿಪಲ್ ಟೋಲ್‌ಗೇಟನ್ನು ಸಹಾ ಒಂದುಗೂಡಿಸಿ ಮ್ಯುನಸಿಪಾಲಿಟಿಯವರ ಆಡಳಿತಕ್ಕೆ ವಹಿಸಿಕೊಟ್ಟಲ್ಲಿ ಮ್ಯುನಸಿಪಾಲಿಟಿಯವರು ಧನಸಹಾಯದವರಿಗೆ ಈ ಬಾಬಿನಲ್ಲಿ ಸಾಲೀಯಾನ ಖರ್ಚು ಜಾತಾ ಇರುವ ವರಮಾನವನ್ನು ಕಂಪ್ರೊಮ್ಯೂಷ್‌ಆಗಿ ಪ್ರತಿವರುಷವು ಕೊಡುತ್ತಾ ಬರುತ್ತೇನೆಯಾಗಿ, ಕೃಪೆಯಿಟ್ಟು ವ್ಯಾಪಾರವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಈ ಸೌಕರ್ಯವನ್ನು ಕಲ್ಪಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ ಸ್ವಾಮಿ.

ಈ ಕೊಣನೂರು ಟವ್ನಿನ ವ್ಯವಸಾಯಕ್ಕೆ ಈ ಊರಿನಲ್ಲಿರುವ ಮೇಜರ್ ಕೆರೆಯೇ ಮುಖ್ಯಾಧಾರವಾಗಿರುತ್ತೆ. ಈಚೀಜೆಗೆ ನುಳೆಯು ಈ ಪ್ರಾಂತ್ಯ ಬಹಳ ಕಮ್ಮಿಯಾಗಿರುವುದರಿಂದ ಈ ಕೆರೆಯ ನೀರಿನ ಸೌಲಭ್ಯತೆಯು ನಮ್ಮಗಳಿಗೆ ಇಲ್ಲವಾಗಿರುತ್ತೆ. ಈ ಕೆರೆಗೆ ನೀರು ಬರುವ ಅಲ್ಪಸ್ವಲ್ಪ ವಸತೀಗೆ ಅಲ್ಲಲ್ಲೇ ಅಣೆಕಟ್ಟುಗಳನ್ನು ಕಟ್ಟುವುದರ ಮೂಲಕ ಅಡಚಣೆಯಾಗಿ, ಆ ನೀರನ್ನು ತಿರುಗಿಸಿ ಪೈರಿಗೆ ಉಪಯೋಗಿಸುಕ್ಕೊಳ್ಳುತ್ತಾ ಇರುತ್ತಾರೆಯಾಗಿ ಈ ಕೆರೆಗೆ ನೀರಿನ ಆಸರೆಯೇ ಇಲ್ಲದಂತಾಗಿರುತ್ತೆ. ಈ ಕಾರಣ ಸಾತೇಹಳ್ಳಕ್ಕೆ ಹಿಂಪೆ ಕಟ್ಟಿದ್ದ ಅಣೆಕಟ್ಟನ್ನು ರಿಪೇರಿ ಮಾಡಿಸುವುದರ ಮೂಲಕ ಈ ಕೆರೆಗೆ ನೀರು ಸರಬರಾಯಿ ಆಗುವಂತೆ ಒಂದು Feeder Chanal ನ್ನು ಏರ್ಪಡಿಸುವುದು ಅತ್ಯಾವಶ್ಯಕವಾದ ಮತ್ತು ಅತಿಜರೂರಾದ ಕೆಲಸವೆಂಬುದನ್ನು ತಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತೇವೆ. ಈ ಕಾಂಗಾರಿಗೋಸ್ಕರ ಈ ಕೆರೆಯ ಕೆಳಗಣ ಅಚ್ಚುಕಟ್ಟುದಾರರುಗಳು ಮತ್ತು ಈ ಪ್ರಾಂತ್ಯದ ಈ ಸ್ಕೀಂಗೆ ಸಂಬಂಧಪಟ್ಟ ಸ್ಥಿತಿಗತಿಗಳು ಸಹ ಎಕರೆ **1** ಕ್ಕೆ **100** ರೂಪಾಯಿಗಳಂತೆ ಕಂಪ್ರೊಮ್ಯೂಷ್ ಕೊಡಲು ಸಿದ್ಧರಾಗಿರುತ್ತಾರೆ ಸ್ವಾಮಿ.

ಈ ಸ್ಕೀಂ ಇಂಜನೀಯರ್ ಇಲಾಖೆಯವರ ಪರ್ಯಾಲೋಚನೆಯಲ್ಲಿರುತ್ತಾಗಿ ಧನಸಹಾಯದವರು ದಯವಿಟ್ಟು ಕೂಡಲೇ ಈ ಕೆಲಸವನ್ನು ಮಾಡಿಸಿಕೊಟ್ಟು, ಈ ಪ್ರಾಂತ್ಯದ ರೈತಾಪೀ ಜನಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಡಬೇಕಾಗಿ ನಾವುಗಳು ತಮ್ಮನ್ನು ಕೇವಲ ವಿಧೇಯರಾಗಿ ಪ್ರಾರ್ಥಿಸುತ್ತೇವೆ ಸ್ವಾಮಿ.

ನಮ್ಮ ಮಹಾಪ್ರಭುಗಳವರಾದ ಶ್ರೀಮನ್ ಮಹಾರಾಜರವರು ತಮ್ಮ ಅಧಿಕಾರಾವಧಿಯನ್ನು **5** ವರ್ಷಗಳು ಹೆಚ್ಚಿಸಿರುವುದಕ್ಕೆ ನಾವುಗಳೆಲ್ಲರೂ ಬಹಳ ಹರ್ಷಿತರಾಗಿದ್ದೇವಲ್ಲದೆ ಭಗವಂತನು ತಮಗೆ ಚಿರಾಯುರಾರೋಗ್ಯವನ್ನು ಮತ್ತು ಇತೋಪ್ಯತಿಶಯವನ್ನು ಸಹ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ನಮ್ಮನ್ನಾಳುವ ನಮ್ಮ ರಾಜಋಷಿಗಳಾದ ಶ್ರೀಮನ್ ಮಹಾರಾಜರವರಲ್ಲಿ ನಮಗಿರುವ ನಿಶ್ಚಲವಾದ ರಾಜಭಕ್ತಿಯನ್ನು ತಮ್ಮ ಮೂಲಕ ಅರಿಕೆ ಮಾಡಿಕ್ಕೊಳ್ಳುತ್ತೇವೆಯಾಗಿ ತಾವು ಕೃಪೆಯಿಟ್ಟು ನಮ್ಮ ಮಹಾಪ್ರಭುಗಳವರಿಗೆ ಈ ವಿಷಯವನ್ನು ಶ್ರುತಪಡಿಸಲು ತಮ್ಮನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ ಸ್ವಾಮಿ.

ತಮ್ಮ ಅತ್ಯಂತ ವಿಧೇಯರುಗಳಾದ,

ಕೊಣನೂರು ಪೌರಸಭಾ ಸದಸ್ಯರುಗಳು.

ಕೊಣನೂರು,

ತಾರೀಖು 20—11—1938.

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಸ್ಥಾನದ ದಿವಾನರವರಾದ ಅಮೀರ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಓ.ಬಿ.ಇ. ಅವರು, ಹಾಸನ ಡಿಸ್ಟ್ರಿಕ್ಟ್ ಕೊಣನೂರು ಪೌರಸಭೆಯವರ ಬಿನ್ನವತ್ತಳೆಗೆ ಪ್ರತ್ಯುತ್ತರವಾ ಅಪ್ಪಣೆ ಕೊಡಿಸಿದ ಭಾಷಣ.

೧೯೩೮ನೆಯ ಇಸವಿ ನವೆಂಬರು ೨೦ನೆಯ ತಾರೀಖು.

ಪೌರಸಭೆಯ ಸದಸ್ಯರೇ, ಮಹಿಳೆಯರೇ ಮತ್ತು ಮಹಾಶಯರೇ,

ಈ ಊರಿನಲ್ಲಿ ನಿಮ್ಮೊಡನೆ ಸೇರಿರುವುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ಪೌರಸಭೆಯವರು ನನಗೆ ಬಿನ್ನವತ್ತಳೆಯನ್ನು ಅರ್ಪಿಸಿದ್ದಾರೆ. ನಾನು ಈ ದಿನ ಮೊಟ್ಟಮೊದಲನೆಯ ಸಲ ಈ ಊರಿಗೆ ಬಂದುದಕ್ಕಾಗಿ ಹರ್ಷವನ್ನು ಸೂಚಿಸಿ, ನನ್ನ ವಿಷಯವಾಗಿ ಪ್ರೀತಿಯ ಮಾತುಗಳನ್ನು ಆಡಿದ್ದಾರೆ. ಅಲ್ಲದೆ, ನಾನು ಪದೇ ಪದೇ ಈ ಊರಿಗೆ ಬರುತ್ತಿರಬೇಕೆಂದು ಕೋರಿದ್ದಾರೆ. ಅವರಿಗೆ ನನ್ನಲ್ಲಿ ಎಷ್ಟು ವಿಶ್ವಾಸ ವಿದೆಯೆಂಬುದು ಇದರಿಂದ ಗೊತ್ತಾಗುತ್ತದೆ. ನನಗೆ ದೊರೆತ ಆದರದ ಸ್ವಾಗತಕ್ಕಾಗಿಯೂ, ಈ ಪ್ರೀತಿಯ ಮಾತುಗಳಿಗಾಗಿಯೂ ನಾನು ಕೃತಜ್ಞನಾಗಿದ್ದೇನೆ.

ಈ ಊರಿನ ಪೌರಸಭೆಯು ಏರ್ಪಟ್ಟು ಇನ್ನೂ ಹದಿಮೂರು ವರ್ಷಗಳು ಮಾತ್ರವೇ ಕಳೆದಿವೆ. ಇಷ್ಟು ಅಲ್ಪಕಾಲದಲ್ಲಿ ಇಲ್ಲಿ ನಡೆದಿರುವ ಅಭಿವೃದ್ಧಿಕಾರ್ಯಗಳು ಮೆಚ್ಚಿಕೆಗೆ ಅರ್ಹವಾಗಿವೆ. ಇಷ್ಟು ಸ್ವಲ್ಪಕಾಲದಲ್ಲಿ ಶಾಶ್ವತವಾಗಿರುವ ಅನೇಕ ದೊಡ್ಡದೊಡ್ಡ ಕೆಲಸಗಳನ್ನು ನಡೆಯಿಸಿದ್ದೀರಿ. ಅಲ್ಲದೆ ನೀರಿನ ವಸತಿಯನ್ನು ಕಲ್ಪಿಸಿ, ರಸ್ತೆಗಳನ್ನು ಮಾಡಿಸಿದ್ದೀರಿ. ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಉಚಿತವಾಗಿ ನಿವೇಶನಗಳನ್ನು ಕೊಟ್ಟಿದ್ದೀರಿ. ಇದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ.

ನಿಮ್ಮಿಂದ ನಿವೇಶನಗಳನ್ನು ಪಡೆದ ೩೫ ಹರಿಜನ ಕುಟುಂಬಗಳಲ್ಲಿ ೨೦ ಕುಟುಂಬಗಳವರು ಆಗಲೇ ಮನೆಗಳನ್ನು ಕಟ್ಟಿಕೊಂಡಿದ್ದಾರೆಂಬುದು ಸಂತೋಷದ ಸಂಗತಿ.

ಈ ಊರಿನಲ್ಲಿ ಮಲೇರಿಯಾ ಜ್ವರದ ಹಾವಳಿಯು ಹೆಚ್ಚೆಂದು ಕೇಳಿ ಮನಸ್ಸಿಗೆ ವಿಷಾದವಾಯಿತು. ಉತ್ತಮವಿಧದ ಚರಂಡಿಗಳನ್ನು ಮಾಡಿಸ ಬೇಕಾದುದು ಆವಶ್ಯಕ. ಆದಾಗ್ಯೂ, ಸೊಳ್ಳೆಗಳ ಪಡೆಯು ವೃದ್ಧಿಯಾಗ ದಂತೆ ನೋಡಿಕೊಂಡರೆ, ಮಲೇರಿಯಾ ಜ್ವರದ ಹಾವಳಿಯನ್ನು ಕಡಮೆ ಮಾಡುವುದು ಸಾಧ್ಯ. ಊರಿನವರೆಲ್ಲರೂ ಮನಸ್ಸು ಮಾಡಿದರೆ, ಹಳ್ಳ ಕೊಳ್ಳಗಳನ್ನು ಮುಚ್ಚಿಸಿ, ನೀರು ನಿಲ್ಲುವುದನ್ನು ಸುಲಭವಾಗಿ ತಪ್ಪಿಸ ಬಹುದು; ಕೆಲಸಕ್ಕೆ ಬಾರದ ಗಿಡಗೆಂಟೆಗಳನ್ನು ನಾಶಪಡಿಸಿ ಹಿತ್ತಲುಗಳನ್ನು ಜೊಕ್ಕಟವಾಗಿಡಬಹುದು. ಅದರಿಂದ ಸೊಳ್ಳೆಗಳ ಪಡೆಯು ವೃದ್ಧಿಯಾಗು ವುದು ಬಹಳ ಕಡಮೆಯಾಗುತ್ತದೆ. ಸೊಳ್ಳೆಯ ತೆರೆಗಳನ್ನು ಕಟ್ಟಿಕೊಂಡು ನಿದ್ದೆಮಾಡುವಷ್ಟು ಅನುಕೂಲವಿರುವವರು ಆ ರೀತಿ ಮಾಡಬಹುದು. ಇಷ್ಟರಮೇಲೂ ಮಲೇರಿಯಾ ಜ್ವರ ಬಂದರೆ ತಕ್ಕ ಚಿಕಿತ್ಸೆಯನ್ನು ಪಡೆಯ ಬೇಕು. ಎಲ್ಲಕ್ಕೂ ಮೇಲಾಗಿ, ಮಲೇರಿಯಾ ಜ್ವರ ಬಾರದಂತೆ ನೋಡಿ ಕೊಳ್ಳಬೇಕಾದರೆ ಯಾವ ರೀತಿ ಎಚ್ಚರಿಕೆಯಿಂದ ನಡೆಯಬೇಕೆಂಬುದನ್ನು ವೈದ್ಯರಿಂದ ತಿಳಿದುಕೊಂಡು, ಅದರಂತೆ ನಡೆಯಬೇಕು. ಹಾಗೆ ಮಾಡಿದಲ್ಲಿ ಮಲೇರಿಯಾ ರೋಗದ ಹಾವಳಿಯು ಬಹಳ ಕಡಮೆಯಾಗುವುದರಲ್ಲಿ ಸಂದೇ ಹವಿಲ್ಲ. ರೋಗಗಳ ಹಾವಳಿಯನ್ನು ಕಡಮೆ ಮಾಡುವ ವಿಷಯದಲ್ಲಿ, ಮುಂಜಾಗರೂಕತೆಯ ಏರ್ಪಾಡುಗಳನ್ನು ಮಾಡುವುದರಿಂದ ಬಹಳ ಸಹಾ ಯವಾಗುತ್ತದೆ.

ಈ ಊರಿನಲ್ಲಿ ಹೆರಿಗೆ ಆಸ್ಪತ್ರೆಯ ಕಟ್ಟಡಕ್ಕಾಗಿ ಶ್ರೀಮಾನ್ ವೆಂಕಟರಂಗಶೆಟ್ಟಿಯವರು ೫,೦೦೦ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನ ಮಾಡಿರುವರೆಂಬುದನ್ನು ಕೇಳಿ ಹರ್ಷವುಂಟಾಯಿತು. ಈ ರೀತಿ ಪರೋಪಕಾರ ಬುದ್ಧಿಯಿರುವ ಮಹಾಶಯರುಗಳ ಸಂಖ್ಯೆಯು ಹೆಚ್ಚುತ್ತಿರುವುದು ನಮ್ಮ ನಾಡಿನ ಹೆಮ್ಮೆ. ಇಂಥ ಹಣಗಾರರು ಇರುವುದು ಊರಿಗೇ ಭೂಷಣ.

ಇನ್ನು, ಪೌರಸಭೆಯವರು ಮಾಡಿಕೊಂಡಿರುವ ಅರಿಕೆಗಳ ವಿಷಯ. ಅವುಗಳ ವಿಷಯವಾಗಿ ನಾನು ಅವರೊಡನೆ ಚರ್ಚಿಸುವೆನು. ಸಾಧ್ಯಕಂಡ ಸಹಾಯವನ್ನು ಸರ್ಕಾರದವರು ಅವಶ್ಯವಾಗಿ ಮಾಡುವರು. ಈ ಊರಿನ ಪೌರಸಭೆಯವರ ರಾಜಭಕ್ತಿ ವಿಶ್ವಾಸಗಳನ್ನು ಆಳುವ ಮಹಾಸ್ವಾಮಿಯವರ ದಿವ್ಯ ಸನ್ನಿಧಿಯಲ್ಲಿ ಶ್ರುತಪಡಿಸಲು ಹರ್ಷಿಸುವೆನು.

ಮಹಿಳೆಯರೇ ಮತ್ತು ಮಹಾಶಯರೇ, ಇಲ್ಲಿ ದೊರೆತ ಆದರದ ಸ್ವಾಗತಕ್ಕಾಗಿ ನಾನು ಮತ್ತೊಂದು ಸಲ ನಿಮ್ಮೆಲ್ಲರಿಗೂ ವಂದನೆಗಳನ್ನು ಸಮರ್ಪಿಸುವೆನು. ನಿಮ್ಮೆಲ್ಲರ ಸುಖ ಸಂತೋಷಗಳೂ ಹೆಚ್ಚಲೆಂಬುದೇ ನನ್ನ ಹಾರೈಕೆ.

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು—ಬೆಂಗಳೂರು.

Dewan's reply to the welcome address presented by the Municipal Council of Konanur in the Hassan District.

20th November 1938.

Replying to the address ~~of~~ presented by the Konanur Municipal Council, Sir Mirza Ismail, Dewan, thanked the members of the Municipal Council and the people of the town for the very warm welcome accorded to him and for the most endearing terms in which they had invited him to visit their little town as often as he could.

Proceeding, the Dewan said that the Municipality of Konanur was formed only 13 years ago and that it was a matter for gratification that it had been able to carry out in so short a time many works of improvement which were both substantial and enduring.

The Municipal Council had made good roads and completed the scheme of water-supply to the town. They had granted free sites to the Harijans and it was worthy of note that twenty, out of thirty five, Harijan families were already living in houses of their own. The Dewan congratulated the Municipal Council on this result.

He was sorry to hear, the Dewan continued, that the people of the town frequently suffered from malaria. The disease could be grappled with and got rid of in two ways - prevention and cure. He believed that prevention was the better of the two, and to this end, the people of the town should co-operate in following the directions of the Department of Health. Stagnant pools of water, which were notorious as breeding places of mosquitoes, should be done away with and lantana and other rank vegetation should be eradicated. These were matters within quite reach of the Municipality and the people. A good drainage was no doubt very essential to the improvement of public health but they should bear in mind the utmost importance of the prevention of the disease towards which every one in the town could easily contribute something.

The Dewan next expressed his great pleasure at the generous donation of Rs.5,000 promised by Mr. Venkataranga Setty towards the construction of a maternity dispensary at the place. It was their pride that the number of such public-spirited and philanthropic men was steadily increasing in the State. Men of the type of Mr. Venkataranga Setty were an ornament to the town in which they lived.

Finally, the Dewan thanked the members of the Municipal Council once again for their warm welcome and expressed his heartiest good wishes for the future health and happiness of the people and the continued prosperity of the town.

[illegible]

[illegible] the [illegible] [illegible] [illegible]

ಮೈಸೂರು ಸೀಮೆಯ ಅಮಾತ್ಯಶ್ರೇಷ್ಠರಾದ

ಅಮೀರ್-ಉಲ್-ಮುಲ್ಕ್ ಸರ್. ಮಿರ್ಜಾ ಎಂ. ಇಸ್ಮಾಯಿಲ್,

ಕೆ.ಸಿ.ಐ.ಇ., ಒ.ಬಿ.ಇ., ಸಿ.ಎಸ್.ಐ., ರವರ ಸನ್ನಿಧಿಯಲ್ಲಿ

ಹಾಸನದ ಡಿಸ್ಟ್ರಿಕ್ಟು ರಾಮನಾಥಪುರದ ಗ್ರಾಮಪಂಚಾಯಿತಿಯವರು ಮತ್ತು ಆ ಪ್ರಾಂತ್ಯದ ರೈತಾಪಿ ಜನಗಳೂ ಸಹ ವಿನಯಪೂರ್ವಕವಾಗಿ ಅರ್ಪಿಸಿದ ಅಭಿನಂದನಾಪತ್ರಿಕೆ.

ಅಮಾತ್ಯವರ್ಯರೇ,

ತಾವು ಮಾದರೀ ಸಂಸ್ಥಾನವೆಂದು ಪ್ರಖ್ಯಾತಿ ಹೊಂದಿರುವ ನಮ್ಮ ಮೈಸೂರು ಸೀಮೆಯ ಮಹತ್ತರವಾದ ಜವಾಬ್ದಾರಿಯುಳ್ಳ ದಿವಾನ್ ಪದವಿಯನ್ನು ಹನ್ನೆರಡೂವರೆ ವರುಷಗಳ ಲಾಗಾಯ್ತು ಅದ್ಭುತವಾದ ದಕ್ಷತೆಯಿಂದಲೂ, ದೇಶವಾತ್ಸಲ್ಯದಿಂದಲೂ, ಪ್ರಜೆಗಳ ಕ್ಷೇಮಾತಿಶಯಗಳಲ್ಲಿ ಮತ್ತು ಅವರ ಪುರೋಭಿವೃದ್ಧಿಯಲ್ಲಿ ನಿರಂತರವಾದ ಮತ್ತು ದೀರ್ಘವಾದ ಆಸಕ್ತಿಯಿಂದಲೂ ನಡೆಸುತ್ತಾ ಬಂದಿರುತ್ತೀರಿ. ಮತ್ತು ಅತ್ಯಂತ ಪುತ್ರವಾತ್ಸಲ್ಯ, ದಯಾರಸ ಮತ್ತು ಕರುಣೆಯಿಂದ ಪ್ರಜೆಗಳನ್ನು ಪರಿಪಾಲಿಸುತ್ತಾ ಬಂದಿರುವ ಮಹಾಪ್ರಭುಗಳಲ್ಲಿ ನಿಶ್ಚಲವಾದ ಭಕ್ತಿ ಮತ್ತು ಗೌರವದಿಂದ ಸೇವೆ ಮಾಡುತ್ತಿರುತ್ತೀರಿ. ಮೈಸೂರು ದೇಶದ ಕೀರ್ತಿಯನ್ನೂ, ಸೊಬಗನ್ನೂ, ಸುಖ ಸಂಪತ್ತುಗಳನ್ನೂ ಸರ್ವತೋಮುಖವಾಗಿ ಅಭಿವೃದ್ಧಿಪಡಿಸುತ್ತಾ ರಾಜ್ಯದ ಯಶಸ್ಸನ್ನೂ ನಾನಾ ದಿಕ್ಕುಗಳಲ್ಲಿಯೂ ಹಬ್ಬಿಸುತ್ತಾ ಇರುವುದನ್ನು ನೋಡಿ ನಾವು ಹೆಮ್ಮೆ ಪಡುತ್ತೇವೆ. ಈರೀತಿ ನಿಸ್ಪೃಹತ್ವದಿಂದಲೂ, ದೇಶಾಭಿಮಾನದಿಂದಲೂ, ರಾಜಭಕ್ತಿಯಿಂದಲೂ, ದಕ್ಷತೆಯಿಂದಲೂ ಹಗಲಿರಳು ದೇಶೋನ್ನತಿಗಾಗಿ ಕೆಲಸ ಮಾಡುತ್ತಿರುವ ತಮಗೆ ಮತ್ತೆ ಐದುವರುಷ ದಿರ್ವಾ ಪದವಿಯಲ್ಲಿ ದೇಶಸೇವೆಯನ್ನು ಮಾಡಿ ಪ್ರಜೆಗಳಿಗೆ ಸುಖ ಸೌಕರ್ಯಗಳು ಹೆಚ್ಚಿಸುವಂತೆ ಕೃಪಾಮಯರಾದ ಶ್ರೀಮ್ ಮಹಾರಾಜರವರು ಅಪ್ಪಣೆ ಮಾಡಿರುವುದಕ್ಕಾಗಿ ನಾವುಗಳು ಶ್ರೀಮ್ಮಹಾರಾಜರವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ.

ತಾವು ದಿರ್ವಾ ಪದವಿಗೆ ದಯಮಾಡಿಸಿದಲಾಗಾಯ್ತು ಬೆಂಗಳೂರು ಮೈಸೂರು ನಗರಗಳ ಅಭಿವೃದ್ಧಿಗಳಲ್ಲದೆ ಸಣ್ಣ ಸಣ್ಣ ಪಟ್ಟಣಗಳು ದೂರದಲ್ಲಿರುವ ಕುಗ್ರಾಮಗಳು ಸಹಾ ತಮ್ಮ ದೃಷ್ಟಿಗೆ ಬಿದ್ದು ದೇಶದಲ್ಲೆಲ್ಲಾ ಗ್ರಾಮಾಭಿವೃದ್ಧಿಕಾರ್ಯಗಳೂ, ಗ್ರಾಮಕೈಗಾರಿಕೆಗಳೂ, ಹೆಚ್ಚುಹೆಚ್ಚಾಗಿ ನಡೆಯುತ್ತಿವೆ. ರಸ್ತೆಗಳೂ, ಭಾವಿಗಳೂ, ಸೇತುವೆಗಳೂ, ಸಂಸ್ಕೃತ, ಆಂಗ್ಲ, ಕನ್ನಡ, ಮತ್ತು ಉರ್ದು ಪಾಠಶಾಲೆಗಳೂ, ಆಸ್ಪತ್ರೆಗಳೂ, ಪಶುವೈದ್ಯ, ಹೆರಿಗೆ ಆಸ್ಪತ್ರೆಗಳೂ, ಆಯುರ್ವೇದ ಮತ್ತು ಯುನಾನಿವೈದ್ಯ, ಮಹತ್ತರವಾದ ನೀರಾವರಿ ಕಾಮಗಾರಿಗಳೂ, ತೋಪುಗಳೂ, ಉದ್ಯಾನವನಗಳೂ ಹೆಚ್ಚುತ್ತಿವೆ. ಮಸೀತಿಗಳು, ಚರ್ಚುಗಳು, ಮಠಗಳು, ದೇವಸ್ಥಾನಗಳು, ಇವುಗಳ ಜೀರ್ಣೋದ್ಧಾರಗಳು ಹೆಚ್ಚುತ್ತಿವೆ. ದನಕರುಗಳ ಅಭಿವೃದ್ಧಿ ಕೆರೆಗಳ ಜೀರ್ಣೋದ್ಧಾರ ಈ ಕಾರ್ಯಗಳಲ್ಲಿ ತಾವು ವಹಿಸಿರುವ ಶ್ರಮ ಶ್ಲಾಘನೀಯವಾಗಿದೆ.

ಪಟ್ಟಣಗಳಲ್ಲೂ ಗ್ರಾಮಗಳಲ್ಲೂ ಕುಡಿಯುವ ನೀರಿನ ಸೌಕರ್ಯಗಳು ಮೇಲಾಗಿ ವಿದ್ಯುತ್‌ಶಕ್ತಿಯ ವಿಶಾಲವಾದ ಹರಡುವಿಕೆಯೂ ಇವೇ ಮೊದಲಾಗಿ ಎಲ್ಲಾ ಭಾಗಗಳ ಅಭಿವೃದ್ಧಿಗೂ, ಹಗಲಿರುಳೂ ತಾವು ದುಡಿಯುತ್ತಿರುವುದು ಮೈಸೂರು ಸೀಮೆಯ ಪ್ರಜೆಗಳಾದ ನಮ್ಮಗಳ ದೊಡ್ಡ ಭಾಗ್ಯವೇಸರಿ.

ಪ್ರಕೃತ ಈ ಡಿಸ್ಟ್ರಿಕ್ಟಿನಲ್ಲಿ ತಮ್ಮ ದಿರ್ವಾಗಿರಿ ಫಲವಾಗಿ ಹೆಚ್ಚುಕಡಿಮೆ ಪ್ರತಿಯೊಂದು ಹೋಬಳಿಗೂ ಒಂದೊಂದು ಆಸ್ಪತ್ರೆ, ಮುಖ್ಯವಾದ ಹಳ್ಳಿಗಳಿಗೆಲ್ಲಾ ಯಾವಾಗಲೂ ನೀರು ಹೋಗದ ಭಾವಿಗಳು, ತಾಲ್ಲೂಕಿಗೆಲ್ಲಾ ಒಂದೊಂದು ಪಶುವೈದ್ಯಶಾಲೆ, ಹಾಸನ, ಹೊಳೆನರಸೀಪುರ ಮತ್ತು ಸಕಲೇಶಪುರ ಇವುಗಳಿಗೆ ಘನವಾದ ಹೆರಿಗೆ ಆಸ್ಪತ್ರೆಗಳು, ಗೋರೂರು, ಶೆಟ್ಟಿಹಳ್ಳಿ, ಬೆಳಗೋಡು, ಕೇರಲಾಪುರ ಈ ಸ್ಥಳಗಳಲ್ಲಿ ಲಕ್ಷಾಂತರ ರೂಪಾಯಿಗಳ ಖರ್ಚಿನಿಂದ ಸೇತುವೆಗಳನ್ನೂ, ಹೊಳೆನರಸೀಪುರದಿಂದ ಚನ್ನರಾಯಪಟ್ಟಣಕ್ಕೆ ಐವತ್ತಾರುಸಾವಿರ ರೂಪಾಯಿಗಳ ಖರ್ಚಿನಿಂದ ಹೊಸ ರಸ್ತೆಯನ್ನೂ, ಹಳೇಬೀಡಿನಿಂದ ಹಾಸನಕ್ಕೆ ಇಪ್ಪತ್ತನಾಲ್ಕುಸಾವಿರ ರೂಪಾಯಿಗಳ ಖರ್ಚಿನಿಂದ ಹೊಸ ರಸ್ತೆಯನ್ನೂ, ಮತ್ತು ಅಲೂರಿನಿಂದ ಕುಂದೂರಿಗೆ ಹದಿನಾರುಸಾವಿರ ರೂಪಾಯಿಗಳ ಖರ್ಚಿನಿಂದ ಹೊಸ ರಸ್ತೆಯನ್ನೂ, ಆರವತ್ತು ಸಹಸ್ರ ರೂಪಾಯಿಗಳ ಖರ್ಚಿನಿಂದ ಬೇಲೂರು, ಹಳೇಬೀಡು ದೇವಸ್ಥಾನದ ಜೀರ್ಣೋದ್ಧಾರವು ಸಹಾ ನಡೆದಿರುತ್ತವೆ. ಈ ರಾಮನಾಥಪುರದ ವಿಚಾರದಲ್ಲಿ ತಾವು ಶ್ರೀಮನ್ ಮಹಾರಾಜರವರ ಪ್ರೈವೇಟ್ ಸೆಕ್ರಿಟೆರಿಯಾಗಿದ್ದಾಗ ಇಲ್ಲಿಗೆ ಭೇಟಿ ಕೊಟ್ಟಲಾಗಾಯ್ತು ಆಗಿಂದಾಗ್ಗೆ ಉಪಕಾರ ಮಾಡುತ್ತಿರುತ್ತೀರಿ. ಶ್ರೀ ರಾಮೇಶ್ವರ ದೇವಸ್ಥಾನಕ್ಕೋಸ್ಕರವಾಗಿ ಬಿಲ್ವಪತ್ರೆ, ಹಿಪ್ಪೆ ಮುಂತಾದ ಗಿಡಗಳುಳ್ಳ ವಿಸ್ತಾರವಾದ ಜಮೀನನ್ನು ಬಿಡಿಸಿಕೊಟ್ಟಿರುತ್ತೀರಿ. ಈ ಊರಿನಲ್ಲಿ ಸ್ತ್ರೀಯರು ನದಿಯಿಂದ ನೀರನ್ನು ತರಲು ಇದ್ದ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಒಂದು ಸಾವಿರ ರೂಪಾಯಿನ ಖರ್ಚಿನಿಂದ ಹೊಸ ಸೋಪಾನ ಕಟ್ಟಿಸಿಕೊಟ್ಟಿರುವುದಲ್ಲದೆ, ಬ್ರಿಟಿಷ್ ಸಾರ್ವಭೌಮ ಸರಕಾರದಿಂದ ಒಂದು ಲಕ್ಷ ಇಪ್ಪತ್ತೈದು ಸಾವಿರ ರೂಪಾಯಿಗಳ ದ್ರವ್ಯಸಹಾಯ ಪಡೆದು ಮೈಸೂರು ಸರ್ಕಾರದಿಂದ ಒಂದೂವರೆ ಲಕ್ಷ ರೂಪಾಯಿಗಳ ದ್ರವ್ಯವನ್ನು ಸೇರಿಸಿ ಎರಡು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳ ದ್ರವ್ಯಸಹಾಯದಿಂದ ನಾವುಗಳು ಮತ್ತು ನಮ್ಮ ಹಿರಿಯರು ಐವತ್ತು ಆರವತ್ತು ವರ್ಷಗಳಿಂದ ಅಪೇಕ್ಷೆಪಟ್ಟು ಹಂಬಲಿಸುತ್ತಾ ಇದ್ದ ಸೇತುವೆಯನ್ನು ನಮ್ಮ ಮಹಾಪ್ರಭುಗಳ ಆಮೃತಹಸ್ತದಿಂದ ಅಸ್ತಿಭಾರವನ್ನು ಹಾಕಿಸಿ ಈ ಕೆಲಸವನ್ನು ಜಾಗ್ರತೆಯಾಗಿ ಕಟ್ಟಿಸಿಕೊಟ್ಟು ಈ ಪ್ರಾಂತ್ಯದ ಜನ ಜಾನುವಾರುಗಳಿಗೆ ಮಹದುಪಕಾರ ಮಾಡಿರುವುದಲ್ಲದೆ, ದಕ್ಷಿಣಕಾಶಿಯೆಂದು ಪ್ರಖ್ಯಾತಿಯಾಗಿರುವ ಮತ್ತು ಕಾವೇರೀನದಿ, ಅಗಸ್ತೇಶ್ವರ, ಶ್ರೀ ರಾಮೇಶ್ವರ, ಶ್ರೀ ಪಟ್ಟಾಭಿರಾಮಸ್ವಾಮಿ, ಶ್ರೀ ಸುಬ್ರಹ್ಮಣ್ಯಸ್ವಾಮಿಯವರ ದೇವಾಲಯಗಳಿಂದಲೂ, ಗೋಗರ್ಭ, ಗಾಯಿತ್ರೀಶಿಲ, ವಹ್ನಿಪುಷ್ಕರಿಣಿ ಇವುಗಳಿಂದ ಪವಿತ್ರೀಕೃತವಾಗಿರುವ ಈ ಮಹಾಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೂ, ರೇವುಪಟ್ಟಣವಾದ ಕನ್ನಾನೂರಿಗೂ ಪ್ರಯಾಣಮಾಡುವ ವ್ಯಾಪಾರಿಗಳಿಗೂ ಸಹ ಅಮೋಘವಾದ ಉಪಕಾರವನ್ನು ತಾವು ಮತ್ತು ತಮ್ಮ ಸರ್ಕಾರದವರು ಸಹಾ ಮಾಡಿರುವುದು ಚಿರಸ್ಮರಣೀಯವಾಗಿದೆ. ಈ ಸೇತುವೆಯು ಏಳುನೂರೈವತ್ತಡಿ ಉದ್ದವಾಗಿಯೂ ಚಿತ್ರವಿಚಿತ್ರವಾದ ಕೈಪಿಡಿಯಿಂದಲೂ ಕಣ್ಮನಗಳಿಗೆ ಅತ್ಯಾನಂದ ಉಂಟುಮಾಡುವುದಾಗಿಯೂ ಇದೆ ಈ ಸೇತುವೆಯ ಕಟ್ಟಡದ ಕೆಲಸವನ್ನು ಆಸಕ್ತಿಯಿಂದಲೂ ಶೀಘ್ರವಾಗಿಯೂ ಮಾಡಿಕೊಟ್ಟ ಎಗ್ಜಿಕ್ಯೂಟಿವ್ ಇಂಜನಿಯರ್ ಮಿll ರಾll ಲಕ್ಷ್ಮೀನರಸಿಂಹಯ್ಯನವರಿಗೂ, ಈ ಸ್ಥಳಕ್ಕೆ ಪದೇಪದೇ ಖುದ್ದಾಗಿ ದಯಮಾಡಿಸಿ ಮೇಲ್ವಿಚಾರಣೆಯನ್ನು ನೋಡುತ್ತಾ ಬಂದು ಆಗಾಗ್ಗೆ ಉಚಿತ ಸಲಹೆಗಳನ್ನು ಕೊಡುತ್ತಾ ಬಂದ ಛೀಫ್ ಇಂಜನಿಯರ್ ದಿರ್ವಾಬಹದ್ದೂರ್, ಎನ್. ಎನ್. ಐಯ್ಯಂಗಾರ್ರವರಿಗೂ ನಾವುಗಳು ಬಹಳಮಟ್ಟಿಗೆ ಕೃತಜ್ಞರಾಗಿದ್ದೇವೆ.

ಸದಾಕಾಲದಲ್ಲೂ ಮೈಸೂರು ಪ್ರಜೆಗಳ ಹಿತವನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡು ದುಡಿಯುತ್ತಿರುವ ತಮಗೆ ನಾವುಗಳು ಎಷ್ಟು ತಡೆದರೂ ಉಕ್ಕಿಉಕ್ಕಿ ಬರುತ್ತಿರುವ ನಮ್ಮ ಸಂತೋಷವನ್ನು ಮತ್ತು ಕೃತಜ್ಞತೆಯನ್ನು ಬಹಿರಂಗವಾಗಿ ಅರ್ಪಿಸಲು ಈ ಅವಕಾಶ ದೊರೆತಿದ್ದಕ್ಕಾಗಿ ನಾವು ತುಂಬಾ ಸಂತೋಷಪಡುತ್ತೇವೆ.

ತಮ್ಮ ದಿರ್ವಾಗಿರಿಯ ಅವಧಿಯು ಮೇಲಿಂದಮೇಲೆ ಹೆಚ್ಚಿಸಲ್ಪಡುತ್ತಾ ಬಂದು ಅದರ ರಜತ ಮಹೋತ್ಸವವೂ ಬೆಳೆದು ಪ್ರಜೆಗಳ ಸುಖಸಂತೋಷಗಳೂ, ಮೈಸೂರಿನ ಕೀರ್ತಿಯೂ ಮತ್ತಷ್ಟು ದಿಗಂತವಾಗಿ ವಿಸ್ತರಿಸುವಂತೆ ಈ ಕ್ಷೇತ್ರಾಭಿಮಾನ ದೇವರುಗಳು ಅನುಗ್ರಹಿಸಲಿಂದು ಪ್ರಾರ್ಥಿಸುತ್ತೇವೆ. ನಮ್ಮನ್ನಾಳುವ ಶ್ರೀಮ್ಮಹಾರಾಜರವರ ಅಡಿದಾವರೆಗಳಲ್ಲೂ ರಾಜಮನೆತನದವರಲ್ಲೂ ಮತ್ತು ಅವರ ಘನತಮವಾದ ರಾಜ್ಯಾಡಳಿತದಲ್ಲೂ ನಮ್ಮಗಳಿಗಿರುವ ಅನನ್ಯವಾದ ನಿಶ್ಚಲವಾದ ರಾಜಭಕ್ತಿ ವಿಶ್ವಾಸಗಳನ್ನು ಮಹಾಪ್ರಭುಗಳಲ್ಲಿ ಸಮರ್ಪಿಸಬೇಕಾಗಿ ಅತ್ಯಂತ ವಿನಯವಾಗಿ ಬೇಡುತ್ತೇವೆ.

ಇತಿ ತಮ್ಮ ವಿಶ್ವಾಸಿಗಳಾದ

ರಾಮನಾಥಪುರದ ಗ್ರಾಮಪಂಚಾಯಿತಿ ಮೆಂಬರುಗಳು ಮತ್ತು ಈ ಪ್ರಾಂತ್ಯ ರೈತಾಪಿ ಜನಗಳು.

ರಾಮನಾಥಪುರ,
೨೦ ೧೧-೧೯೩೮

B. S. IYENGAR, PRINTER, B. CITY.

ಮೈಸೂರು ಸಂಸ್ಥಾನದ ದಿವಾನರವರಾದ ಅವಿರ್ಜಾ-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಓ.ಬಿ.ಇ. ಅವರು, ಹಾಸನ ಡಿಸ್ಟ್ರಿಕ್ಟು ರಾಮನಾಥಪುರದ ಗ್ರಾಮ ಪಂಚಾಯಿತಿಯವರೂ ಮತ್ತು ಆ ಪ್ರದೇಶದ ರೈತರೂ ಒಪ್ಪಿಸಿದ ಬಿನ್ನವತ್ತಳೆಗೆ ಪ್ರತ್ಯುತ್ತರವಾಗಿ ಅಪ್ಪಣೆ ಕೊಡಿಸಿದ ಭಾಷಣ.

೧೯೩೮ನೆಯ ಇಸವಿ ನವೆಂಬರು ೨೦ನೆಯ ತಾರೀಖು.

ಗ್ರಾಮಪಂಚಾಯಿತಿ ಸದಸ್ಯರೇ, ಮಹಿಳೆಯರೇ ಮತ್ತು ಮಹಾಶಯರೇ,

ನೀವುಗಳು ಆದರದಿಂದ ನನ್ನನ್ನು ಬರಮಾಡಿಕೊಂಡು ಬಿನ್ನವತ್ತಳೆಯನ್ನು ಒಪ್ಪಿಸಿದ್ದೀರಿ. ಬಹಳ ವಿಶ್ವಾಸದ ಮಾತುಗಳನ್ನು ಸೂಚಿಸಿದ್ದೀರಿ. ಇದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ಸರ್ಕಾರದವರು ಶ್ರಮಿಸುತ್ತಿರುವುದೇ ಪ್ರಜೆಗಳ ಅಭ್ಯುದಯಸಾಧನೆಗಾಗಿ. ಸರ್ಕಾರದವರು ನಾನಾ ಅಭಿವೃದ್ಧಿಕಾರ್ಯಗಳನ್ನು ನೆರವೇರಿಸುವುದೂ ಪ್ರಜೆಗಳ ಯೋಗಕ್ಷೇಮಕ್ಕಾಗಿ. ಆದಕಾರಣ, ಅವುಗಳಿಂದ ಪ್ರಜೆಗಳಿಗೆ ಸಂತೋಷವಾದರೆ, ಸರ್ಕಾರದವರಿಗೂ ಸಂತೋಷ. ಈ ದೃಷ್ಟಿಯಿಂದ ನೋಡಿದರೆ, ನಿಮ್ಮ ಶ್ಲಾಘನೆಯ ಮಾತುಗಳಿಗೆ ತುಂಬ ಬೆಲೆ. ನಿಮ್ಮ ಶ್ಲಾಘನೆಯ ಮಾತುಗಳಿಂದ ಸರ್ಕಾರದವರಿಗೆ ತುಂಬ ಸಂತೋಷ. ಪ್ರಜೆಗಳ ಸಂತೋಷವೇ, ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಸಂತೋಷ. ಮಹಾಸ್ವಾಮಿಯವರ ದಿವ್ಯ ಸನ್ನಿಧಿಯಲ್ಲಿ ನಿಮ್ಮ ರಾಜಭಕ್ತಿವಿಶ್ವಾಸಗಳನ್ನು ಶ್ರುತಪಡಿಸಲು ಹರ್ಷಿಸುವೆನು.

ಈ ಊರು ಸುಂದರವಾದ ಪವಿತ್ರಕ್ಷೇತ್ರ. ಇಲ್ಲಿ ತಾಯಿ ಕಾವೇರಿಯು ಶೋಭಿಸ್ತಿದ್ದಾಳೆ. ಬಗೆ ಬಗೆಯ ಐತಿಹ್ಯಗಳಿಂದ ಈ ಕ್ಷೇತ್ರವು ಪ್ರಸಿದ್ಧವಾಗಿದೆ! ಆದಕಾರಣ, ನೀವುಗಳು ಊರನ್ನೂ ದೇವಾಲಯ

ಗಳನ್ನೂ, ಸೋಪಾನವನ್ನೂ ಇನ್ನೂ ಚೊಕ್ಕಟವಾಗಿಟ್ಟುಕೊಳ್ಳಬೇಕೆಂದು ನನಗೆ ಆಶೆ. ಅದರಿಂದ ಇಲ್ಲಿಗೆ ಬರುವ ಯಾತ್ರಿಕರ ಭಕ್ತಿಯೂ ಹೆಚ್ಚುವುದು ನಿಮ್ಮ ಮನಸ್ಸಿನ ಭಕ್ತಿಯೂ ಹೆಚ್ಚಿ ಮನಸ್ಸಿಗೆ ಹರ್ಷವೂ ಆಗುವುದು. ಅಲ್ಲದೆ, ಈ ಪ್ರದೇಶದ ಆರೋಗ್ಯ ಸ್ಥಿತಿಯೂ ಉತ್ತಮಪಡುವುದು.

ಮಹಿಳೆಯರೇ ಮತ್ತು ಮಹಾಶಯರೇ, ನಿಮ್ಮ ಸುಖಸಂತೋಷಗಳು ದಿನದಿನವೂ ವೃದ್ಧಿಯಾಗಲೆಂದು ಹಾರೈಸುವೆನು.

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು—ಬೆಂಗಳೂರು.

Dewan's speech in reply to the address of welcome presented by the Village panchayet, Ramanathpur, Hassan District.

20th November 1938.

Acknowledging the address presented by the villagers of Ramanathpur, Sir Mirza Ismail, Dewan, remarked on the extraordinary beauty of the place. The Cauvery ever flowed past the village in her majestic course. Ramanathpur was renowned as a place of pilgrimage, where the ancient temples attracted devotees all the year round. The Dewan, therefore, advised the people to leave nothing undone to keep the temples and their surroundings and the river bank absolutely neat and clean.

He next thanked the Panchayet for their appreciative references to what the Government had done, and were still doing, for the village. He valued their words of appreciation for a special reason. They showed that the people were happy and it was a fact known to all that His Highness the Maharaja found his true happiness in that of his subjects. Thus, foremost among the objects of the Government was the improvement of the condition of the masses - of the millions of cultivators living in villages and towns and this should be easy of achievement if every village in the State would learn the utility of common aims and endeavours that had inspired the people of Ramanathpur.

Mr Humphrey Lyon

Dr Alfredo Betancourt, Buenos Aires

Thank you very much for your letter of 15th inst.

To.

Amin-ul-Mulk Sir Mirza M. Ismail K.C.I.E., O.B.E., C.St.J.,

DEWAN OF MYSORE.

Esteemed Sir,

May I at the outset tender my feelings of deepest gratitude for the kindness and readiness with which you have been pleased to grant my prayer for associating your august name with this building by consenting to perform its opening ceremony on this auspicious day.

This town is the headquarters of a district comprising the backward Malnad and the forward Midan taluks attracting distinguished visitors from distances far and wide on account of its salubrious climate and the treasure houses of ancient art and sculpture exhibited in the temples of Halebed, Belur and Sravanabelgola, and other smaller temples such as Doddagaddavalli, Koramangal, Arsikere and the like. Through your generous assistance the Hindu Temple at Belur has been renovoted at a cost of nearly 60,000/- and we rejoice to hear that you are also taking steps to illuminate it with special kinds of electric flood lights etc., The Hassan town itself has been supplied with Electric Lights and just yesterday you were pleased to open the water works which has been constructed at a cost of nearly **one and a quarter lac of rupees** for the supply of protected water to the Hassan Town. The drainage works estimated to cost Rs. 50,000/- are being pushed through with the generous assistance of the Government. **A new Mosque** has also been built in the **Krishnaraja-puram Extention** with the aid of a munificient grant from the Government.

This is not all. This town, we are happy and proud to know appears to have found special favour with our beloved Sovereign, and it is our great fortune that His Highness has been graciously pleased to select Hassan for a temporary stay now and then. His Highness's eye and your personal attention having both been cast on our Town, we are perfectly confident that this head-quarters town will gain all round importance and far greater advertisment in the near future than it does at present.

The annual Cattle show conducted under the auspices of the Town Municipal Council has in recent years been attracting largest crowds and theatrical troupes; and conferences are being held in larger numbers. But a big and commodious theatre or a spacious hall suitable for such conferences or public lectures or musical or Harikatha performances was a standing desideratum in this town. It has been truly said that if one travels abroad and comes in contact with great men one's wisdom expands like a drop of oil on a sheet of water. To most of us who are steeped in poverty and backward in culture neither a wide travel nor contact with great men by going abroad is a matter of easy achievement. But the benefits of both the acts are now made available to us in an indirect manner by advanced sceientists in the shape of Radios and Takies. Keeping this in view I have made an humble effort to provide these amenities to the public by constructing this building on approved lines at a cost of about Rs. 35,000/ **and** Mr. B. Narayana Rao, of the **Laxmi Film Company, Bangalore** has taken a lease of the same on certain terms for a period of 6 years to exhibit talkies in this building and I hope that the building will serve its purpose to a large section of the public for providing instruction amusement and recreation.

I may be permitted to mention for your kind information that the members of my family are previlaged to trace our ancestry to the late Nawab Tippu Sultan Saheb and that besides enjoying a family pension at the hands of the benign Government many of the members of my family have been privileged off and on to be employed in the service of the Mysore Government where have we been rendering our loyal service in our own humble way.

Your tours in the Districts, your services as the Dewan, your accessability to the people big or small, rich or poor, and generous impulses to do them good and promote their happiness reminds one of quotation of a famous writer:—

" a heart that never hardens,
a temper that never tires and
a touch that never hurts "

which in letter and spirit applies to your goodself. The readiness with which you were pleased to condescend to open this building at such short further notice fully confirms the above sentiment.

Before concluding, I beg leave to convey to His Highness the Maharaja the deep seated loyalty and devotion of my humble self and the members of my humble family long knowon as ' sherrif family ' to the Person and Throne of our Beloved Sovereign His Highness the Maharaja and the Royal house of Mysore,

I now pray that you may be pleased to declare the building open with your very kind and best wishes.

I beg to remain
Esteemed sir,
Your most obediently.
H. D. PEERAN SHERIFF.

HASSAN
19-11-1938.

NATIONAL PRESS, HASSAN